| 4. ಸೂರ್ಯನ ಬೆಳಕು | ಈ) ಸಸ್ಯಗಳ ಬೆಳವಣಿಗೆಗೆ ಆಧಾರ | |

@KTBS
NOT TO BE REPUBLISHED

**ಚಟುವಟಿಕೆ 4 :** ಬಿಟ್ಟ ಸ್ಥಳ ತುಂಬಿರಿ

1. ಭೂಮಿಯ ಮೇಲಿನ ಎಲ್ಲಾ ಶಕ್ತಿಗೆ ------------ ಮೂಲಾಧಾರವಾಗಿದೆ.
2. ವಾತಾವರಣದಲ್ಲಿ ಜೀವಿಗಳ ಉಸಿರಾಟಕ್ಕೆ ------------ ಅನಿಲ ಅವಶ್ಯಕವಾಗಿದೆ.
3. ಕಾಡುಗಳು ನಮಗೆ ------------ ಮತ್ತು ಆಮ್ಲಜನಕವನ್ನು ನೀಡುತ್ತವೆ.
4. ಮಣ್ಣು ಸಸ್ಯಗಳಿಗೆ ಅಗತ್ಯವಾದ ------------ ಮತ್ತು ನೀರನ್ನು ಒದಗಿಸುತ್ತದೆ.

## ಬುನಾದಿ ಹಂತ – ಚಟುವಟಿಕೆ ಹಾಳೆ – 22
## ಯಾರು ಎಲ್ಲಿ? ಏನು ಆಹಾರ? ಜೀವಿಗಳ ವರ್ಗೀಕರಣ

W4N9U5

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ : ಜೀವಿಗಳನ್ನು ಅವುಗಳ ಗುಣಲಕ್ಷಣಗಳ ಆಧಾರದ ಮೇಲೆ ವರ್ಗೀಕರಿಸುವರು.**

ಒಂದು ಜೀವಿಯು ವಾಸಿಸುವ, ಆಹಾರ ಪಡೆಯುವ ಮತ್ತು ಸಂತಾನೋತ್ಪತ್ತಿ ಮಾಡುವ ನೈಸರ್ಗಿಕ ಪರಿಸರವನ್ನು ಅದರ ವಾಸಸ್ಥಾನ ಎನ್ನುತ್ತಾರೆ. ಇದನ್ನು ಮುಖ್ಯವಾಗಿ ಎರಡು ಭಾಗಗಳಾಗಿ ವಿಂಗಡಿಸಬಹುದು.

ಭೂವಾಸಿ – ಭೂಮಿಯ ಮೇಲೆ ವಾಸಿಸುವ ಜೀವಿಗಳು. ಜಲವಾಸಿ – ನೀರಿನಲ್ಲಿ ವಾಸಿಸುವ ಜೀವಿಗಳು.

**ಚಟುವಟಿಕೆ 1 :** ಚಿತ್ರವನ್ನು ಗಮನಿಸಿ ಮತ್ತು ವರ್ಗೀಕರಿಸಿ

ಕೆಳಗಿನ ಚಿತ್ರದಲ್ಲಿರುವ ವಿವಿಧ ಜೀವಿಗಳನ್ನು ಗಮನಿಸಿ ಅವುಗಳನ್ನು ಸರಿಯಾದ ಗುಂಪಿಗೆ ಸೇರಿಸಿ.

     

| ಭೂವಾಸಿ ಜೀವಿಗಳು | ಜಲವಾಸಿ ಜೀವಿಗಳು |
|---|---|
| 1. | 1. |
| 2. | 2. |
| 3. | 3. |

@KTBS NOT TO BE REPUBLISHED

**ಚಟುವಟಿಕೆ 2 :** ಜೀವಿಗಳಿಗೆ ಅವುಗಳ ನಿರ್ದಿಷ್ಟ ವಾಸಸ್ಥಾನದೊಂದಿಗೆ ಹೊಂದಿಸಿ.

| ಪ್ರಾಣಿ/ಸಸ್ಯ | ವಾಸಸ್ಥಾನ (Habitat) | ಉತ್ತರ |
|---|---|---|
| 1. ಒಂಟೆ | ಅ) ಹುಲ್ಲುಗಾವಲು/ಅರಣ್ಯ | 1 |
| 2. ಮೀನು | ಆ) ಮರುಭೂಮಿ | 2 |
| 3. ಸಿಂಹ | ಇ) ಹಿಮಾವೃತ ಪರ್ವತ | 3 |
| 4. ಹಿಮಕರಡಿ | ಈ) ಸಾಗರ/ನದಿ | 4 |

ಪರಿಸರ ವ್ಯವಸ್ಥೆಯಲ್ಲಿ ಪ್ರತಿಯೊಂದು ಜೀವಿಯು ಬದುಕಲು ಆಹಾರದ ಮೇಲೆ ಅವಲಂಬಿತವಾಗಿದೆ. ಅವುಗಳು ತಿನ್ನುವ ಆಹಾರದ ಆಧಾರದ ಮೇಲೆ ಜೀವಿಗಳನ್ನು ಪ್ರಮುಖವಾಗಿ ಮೂರು ಗುಂಪುಗಳಾಗಿ ವಿಂಗಡಿಸಬಹುದು:

1. ಸಸ್ಯಹಾರಿಗಳು (Herbivores)
2. ಮಾಂಸಹಾರಿಗಳು (Carnivores)
3. ಮಿಶ್ರಹಾರಿಗಳು (Omnivores)

**ಚಟುವಟಿಕೆ 3 :** ಕೆಳಗಿನ ಪದಗಳಿಗೆ ಒಂದು ಸಾಲಿನಲ್ಲಿ ಉತ್ತರಿಸಿ.

4. ಸಸ್ಯಹಾರಿಗಳು: ------------------------------------------------------------
5. ಮಾಂಸಹಾರಿಗಳು: ------------------------------------------------------------
6. ಮಿಶ್ರಹಾರಿಗಳು:------------------------------------------------------------

ಕೆಳಗಿನ ಕೋಷ್ಟಕದಲ್ಲಿ ನೀಡಿರುವ ಪ್ರಾಣಿಗಳನ್ನು ಅವುಗಳ ಆಹಾರ ಪದ್ಧತಿಗೆ ಅನುಗುಣವಾಗಿ ಸರಿಯಾದ ಜಾಗದಲ್ಲಿ ಬರೆಯಿರಿ. (ಆನೆ, ಹುಲಿ, ಕರಡಿ, ಮನುಷ್ಯ, ಆಕಳು, ಚಿರತೆ, ಕೋಳಿ, ಜಿಂಕೆ, ಹದ್ದು)

| ಸಸ್ಯಹಾರಿ | ಮಾಂಸಹಾರಿ | ಮಿಶ್ರಹಾರಿ |
|---|---|---|
| 1. | 1. | 1. |
| 2. | 2. | 2. |
| 3. | 3. | 3. |

@KTBS
NOT TO BE REPUBLISHED

**ಚಟುವಟಿಕೆ 4 :** ನಿಮ್ಮ ಮನೆಯ ಸುತ್ತಮುತ್ತ ಕಾಣುವ 5 ಜೀವಿಗಳ ಹೆಸರನ್ನು ಬರೆಯಿರಿ ಮತ್ತು ಅವು ಯಾವ ವರ್ಗಕ್ಕೆ ಸೇರುತ್ತವೆ ಎಂಬುದನ್ನು ಗುರುತಿಸಿ.

| ಜೀವಿಯ ಹೆಸರು | ಆಹಾರ ಪದ್ಧತಿ |
|---|---|
| ಉದಾ: ನಾಯಿ | ಮಿಶ್ರಹಾರಿ |
| 1. | |
| 2. | |
| | |

## ಬುನಾದಿ ಹಂತ – ಚಟುವಟಿಕೆ ಹಾಳೆ – 23
## ಹಸಿರು ಗ್ರಹ – ಜೀವದ ನೆಲೆ

C8F3I5

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ : ನಮ್ಮ ಮನೆ ಭೂಮಿ ಜೀವಸಂಕುಲಗಳನ್ನು ಪೋಷಿಸುವ ಒಂದು ಅನನ್ಯ ಗ್ರಹ ಎಂಬುದನ್ನು ಅರಿಯುವರು.**

ಪ್ರೀತಿಯ ವಿದ್ಯಾರ್ಥಿಗಳೇ, ನಾವೆಲ್ಲ ಭೂಮಿಗೆ ಧಾತ್ರಿ, ಇಳೆ, ವಸುಧಾ, ಪೃಥ್ವಿ, ಧರಿಣಿ, ಧರಿತ್ರಿ, ಭುವನ ಎಂಬ ಹಲವಾರು ಹೆಸರುಗಳಿಂದ ಕರೆಯುತ್ತೇವೆ, ಅದರಲ್ಲಿರುವ ಎಲ್ಲಾ ಸಂಪನ್ಮೂಲಗಳನ್ನು ಸಂತೋಷದಿಂದ ಅನುಭವಿಸುತ್ತಿದ್ದೇವೆ. ಆದರೆ ಇತ್ತೀಚಿನ ದಿನಗಳಲ್ಲಿ ಭೂಮಿಯಲ್ಲಿ ನಡೆಯುತ್ತಿರುವ ಮಲಿನತೆಗಳಿಂದಾಗಿ ಪರಿಸರ ಅಸಮತೋಲನವಾಗುತ್ತಿದೆ. ಪರಿಸರದ ಪ್ರೇಮಿಗಳು ಘೋಷವಾಕ್ಯಗಳನ್ನು ಹೇಳುತ್ತಾ ಪರಿಸರ ಸಂರಕ್ಷಣೆಗಾಗಿ ಹೋರಾಟ ನಡೆಸುತ್ತಿದ್ದಾರೆ. ವಿವಿಧ ಇಲಾಖೆಗಳು ಹಲವಾರು ಯೋಜನೆಗಳನ್ನು ಕೈಗೊಂಡಿವೆ. ಹಾಗಾದರೆ ಇದರಲ್ಲಿ ಭೂಮಿಯ ತಪ್ಪೇನಿದೆ? ಇದಕ್ಕೆ ಕಾರಣ?

ಮನುಷ್ಯನಿಗೆ ಇರಲು ನೆಲವನ್ನು ನೀಡಿ ಅವನ ಉಳಿವಿಗಾಗಿ ಸಹಕರಿಸುತ್ತಿರುವ ಈ ಭೂಮಿಯನ್ನು ಮಾನವ ತನ್ನ ಸ್ವಾರ್ಥಕ್ಕಾಗಿ ಶೋಷಣೆ ಮಾಡುತ್ತಿದ್ದಾನೆ. ಈ ಶೋಷಣೆ ನಿಲ್ಲದಿದ್ದರೆ ಈ ಪ್ರಕೃತಿಯ ವಿಕೋಪಕ್ಕೆ ಮನುಷ್ಯನೇ ಬಲಿಯಾಗುತ್ತಾನೆ. ಆದ್ದರಿಂದ ಪ್ರಕೃತಿಯೊಂದಿಗೆ ಪ್ರೀತಿಯ ಸಂಬಂಧವನ್ನು ಬೆಳೆಸಿಕೊಂಡು ಜೀವಿಸಿದರೆ ಅದು ನಮ್ಮನ್ನು ಪ್ರೀತಿಯಿಂದ ತನ್ನಲ್ಲಿ ಕಾಪಾಡಿಕೊಳ್ಳುತ್ತದೆ. ಆದ್ದರಿಂದ ವಿದ್ಯಾರ್ಥಿಗಳೇ ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ.

@KTBS NOT TO BE REPUBLISHED

ಚಟುವಟಿಕೆ 1:

ನಿಮ್ಮ ಶಿಕ್ಷಕರ ಹಾಗೂ ಸ್ನೇಹಿತರೊಂದಿಗೆ ಚರ್ಚೆ ಮಾಡಿ ಭೂಮಿಯ ಕುಟುಂಬದ ಬಗ್ಗೆ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಸೌರಮಂಡಲದ ಗ್ರಹಗಳನ್ನು ಹೆಸರಿಸಿ.

.................................................................................................

.................................................................................................

.................................................................................................

2. ಭೂಮಿಯ ಮೇಲೆ ಜೀವಿಗಳು ಬದುಕಲು ಬೇಕಾಗುವ ಮುಖ್ಯ ಅಂಶಗಳನ್ನು ಬರೆಯಿರಿ.

.................................................................................................

.................................................................................................

.................................................................................................

3. ಸೂರ್ಯನಿಂದ ಭೂಮಿ ಇರುವ ದೂರವು ಜೀವದ ಅಸ್ತಿತ್ವಕ್ಕೆ ಹೇಗೆ ಸಹಾಯ ಮಾಡುತ್ತದೆ?

.................................................................................................

.................................................................................................

.................................................................................................

4. ಭೂಮಿ ಮತ್ತು ಭೂಮಿಯ ನೆರೆಯ ಗ್ರಹ ಮಂಗಳದ ಲಕ್ಷಣಗಳನ್ನು ಹೋಲಿಕೆ ಮಾಡಿ ಬರೆಯಿರಿ.

..................................................................................................................................

..................................................................................................................................

..............................................................................................................................

## ಚಟುವಟಿಕೆ 2:

ನೀಡಿರುವ ಭೂಪಟದಲ್ಲಿ ಕಾಡುಗಳು, ಸಮುದ್ರಗಳು, ಮರುಭೂಮಿಗಳನ್ನು ಹಸಿರು ನೀಲಿ ಹಾಗೂ ಹಳದಿ ಬಣ್ಣದಿಂದ ಕ್ರಮವಾಗಿ ರಂಗುಗೊಳಿಸಿ



@KTBS
NOT TO BE REPUBLISHED

## ಬುನಾದಿ ಹಂತ – ಚಟುವಟಿಕೆ ಹಾಳೆ – 24
## ಜೀವ ಸಮೃದ್ಧ ಭೂಮಂಡಲ

G1P4A3

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾ ಫಲ : ಭೂಮಿಯ ಮೇಲೆ ಜೀವಸಂಕುಲ ಉಳಿಯಲು ಸಹಾಯಕವಾಗುವ ಅಂಶಗಳನ್ನು ಗುರುತಿಸಿ ಮೆಚ್ಚುಗೆ ವ್ಯಕ್ತಪಡಿಸುವರು**

ಚಟುವಟಿಕೆ 1:

ವಿದ್ಯಾರ್ಥಿಗಳೇ, ನಿಮ್ಮ ಶಿಕ್ಷಕರೊಂದಿಗೆ ಚರ್ಚಿಸಿ ನಮ್ಮ ಗ್ರಹ ಭೂಮಿ ಹಾಗೂ ನೆರೆಯ ಗ್ರಹ ಮಂಗಳದ ಲಕ್ಷಣಗಳ ಆಧಾರದ ಮೇಲೆ ಇರುವ ಹೋಲಿಕೆಗಳನ್ನು ಕೊಟ್ಟಿರುವ ಕೋಷ್ಟಕದಲ್ಲಿ ಬರೆಯಿರಿ.

| ಲಕ್ಷಣ | ಭೂಮಿ | ಮಂಗಳ |
|---|---|---|
| ಗಾಳಿ | | |
| ನೀರು | | |
| ತಾಪಮಾನ | | |
| ಜೀವಿಗಳ ಉಳಿವು | | |

@KTBS NOT TO BE REPUBLISHED

ಚಟುವಟಿಕೆ 2 : ವಿದ್ಯಾರ್ಥಿಗಳೇ, ಭೂಮಿ ಮೇಲಿರುವ ಎಲ್ಲಾ ಜೀವಿಗಳು ತಮ್ಮ ಸಂತತಿಗಳನ್ನು ಮುಂದುವರಿಸಲು ಸಂತಾ–ನೋತ್ಪತ್ತಿ ಎಂಬ ಜೀವ ಕ್ರಿಯೆಯನ್ನು ನಡೆಸುತ್ತವೆ. ಹಾಗಾದರೆ ನೀವು ಬೆಳೆಸಿರುವ ಸಸ್ಯಗಳು ಹಾಗೂ ಸಾಕಿರುವ ಪ್ರಾಣಿಗಳಾ–ದಂತಹ ಹಸು, ನಾಯಿ, ಕೋಳಿ ಇತ್ಯಾದಿಗಳ ಸಂತಾನೋತ್ಪತ್ತಿಗೆ ಸಂಬಂಧಿಸಿದ ಕೆಲವು ಪ್ರಶ್ನೆಗಳಿಗೆ ಶಿಕ್ಷಕರೊಂದಿಗೆ ಚರ್ಚಿಸಿ ಉತ್ತರಿಸಿ.

1. ಗುಲಾಬಿ ಗಿಡ ಹಾಗೂ ದಾಸವಾಳ ಗಿಡಗಳನ್ನು ಹೇಗೆ ಬೆಳೆಸುತ್ತೀರಿ?

   ................................................................................................

   ................................................................................................

2. ಕೋಳಿಗಳನ್ನು ಅಂಡಜಗಳು ಎಂದು ಕರೆಯುತ್ತಾರೆ. ಏಕೆ?

   ................................................................................................

   ................................................................................................

3. ನಾಯಿಗಳಂತಹ ಜೀವಿಗಳು ಹೇಗೆ ಸಂತಾನೋತ್ಪತ್ತಿ ನಡೆಸುತ್ತವೆ? ನಿಮ್ಮ ಉತ್ತರವನ್ನು ಸಮರ್ಥಿಸಿ.

   ................................................................................................

   ................................................................................................

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 1
## ವಸ್ತುಗಳ ಅಳತೆಗಳು

D2F9F7

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ : ದ್ರವಗಳ ಗಾತ್ರವನ್ನು ಅಳೆಯುವರು.**

**ಚಟುವಟಿಕೆ 1 :**

ಒಂದೇ ಗಾತ್ರದ ನಾಲ್ಕು ಅಳತೆ ಜಾಡಿಗಳನ್ನು ನೀಡಲಾಗಿದೆ. ಪ್ರತಿ ಜಾಡಿಯೂ ವಿಭಿನ್ನ ಪ್ರಮಾಣದಲ್ಲಿ ನೀರನ್ನು ಹೊಂದಿದೆ. ಜಾಡಿಯಲ್ಲಿರುವ ದ್ರವದ ನಿಖರ ಅಳತೆಯನ್ನು ಗಮನಿಸುವ ಮೂಲಕ ಕೋಷ್ಟಕವನ್ನು ಪೂರ್ಣಗೊಳಿಸಿ.

| ಕ್ರ.ಸಂ. | ಅಳತೆ ಜಾಡಿ | ಸಾಮರ್ಥ್ಯ | ತುಂಬಿರುವ ನೀರಿನ ಪ್ರಮಾಣ | ಖಾಲಿ ಇರುವ ಜಾಡಿಯ ಅಳತೆ |
|---|---|---|---|---|
| 1 |  | | | |
| 2 |  | | | |
| 3 |  | | | |
| 4 |  | | | |

@KTBS
NOT TO BE REPUBLISHED

**ಚಟುವಟಿಕೆ 2:**

ಶಿಕ್ಷಕರ ಮಾರ್ಗದರ್ಶನದೊಂದಿಗೆ ನಿಯಮಿತ ಮತ್ತು ಅನಿಯಮಿತ ಗಾತ್ರದ ವಿವಿಧ ಸಂಗ್ರಾಹಕಗಳನ್ನು ಸಂಗ್ರಹಿಸಿ. ಅದರಲ್ಲಿ ಭರ್ತಿಯಾಗುವ ನೀರಿನ ಪ್ರಮಾಣ ಅಳತೆ ಜಾಡಿಯಲ್ಲಿ ಅಳೆದು ಕೋಷ್ಟಕದಲ್ಲಿ ಭರ್ತಿ ಮಾಡಿ.

| ಕ್ರ.ಸಂ. | ಸಂಗ್ರಾಹಕ | ಅಳತೆ (ಲೀಟರ್ ಗಳಲ್ಲಿ) | ಅಳತೆ ( ಮಿಲೀ ಲೀಟರ್‌ಗಳಲ್ಲಿ) |
|---|---|---|---|
| 1 | ನೀರಿನ ಬಾಟಲಿ | | |
| 2 | ಬಲೂನ್ | | |
| 3 | ಟೀ ಲೋಟ | | |
| 4 | ಔಷಧಿ ಬಾಟಲಿ | | |

ದ್ರವಗಳ ಗಾತ್ರದ ಅಳತೆಯನ್ನು ನಿಖರವಾಗಿ ಅಳೆಯಲು ನಿರ್ದಿಷ್ಟಪಡಿಸಿದ ಲೀಟರ್‌ನಂತಹ ಅಳತೆಯ ಮಾಪನವನ್ನೇ ಬಳಸಬೇಕು. ಇದರಿಂದ ಹಾಲು, ಅಡುಗೆ ಎಣ್ಣೆ, ಪೆಟ್ರೋಲ್‌ನಂತಹ ದ್ರವಗಳನ್ನು ಅಳೆಯುತ್ತಾರೆ. ದ್ರವ ಪದಾರ್ಥಗಳನ್ನು ನಿರ್ದಿಷ್ಟ ಅಳತೆಮಾನದಲ್ಲಿ ಅಳೆಯುವುದರಿಂದ ಆಗುವ ವ್ಯತ್ಯಾಸ ಮತ್ತು ನಷ್ಟವನ್ನು ತಡೆಯಬಹುದು.

1. ದ್ರವಗಳ ಗಾತ್ರವನ್ನು ಅಳೆಯಲು ಬಳಸುವ ಅಳತೆ ಮಾಪನ ಯಾವುದು?

2. ಒಂದು ಲೀಟರಿಗೆ ಎಷ್ಟು ಮಿಲಿ ಲೀಟರ್‌ಗಳು?

3. ಯಾವ ಭೌತ ಸ್ಥಿತಿಗಳಲ್ಲಿರುವ ವಸ್ತುಗಳ ಗಾತ್ರವನ್ನು ಲೀಟರ್‌ಗಳಲ್ಲಿ ಅಳೆಯಬಹುದು?

4. ಸಾವಿರ ಮಿಲಿ ಲೀಟರ್ ಗಳು ಎಷ್ಟು ಲೀಟರ್‌ಗೆ ಸಮನಾಗಿದೆ ?

5. ಲೀಟರ್‌ಗಿಂತ ದೊಡ್ಡ ಅಳತೆ ಮಾಪನ ಯಾವುದು?

NOT TO BE REPUBLISHED @KTBS

ಚಟುವಟಿಕೆ 3:



ಇಂತಹ ಅಪಾರ ಪ್ರಮಾಣದ ನೀರನ್ನು ಹೇಗೆ ಅಳೆಯುತ್ತಾರೆ ? ಕ್ಯೂಸೆಕ್ಸ್ ಮತ್ತು ಟಿ.ಎಂ.ಸಿ ಎಂಬ ಪದಗಳ ಅರ್ಥ ಗಳನ್ನು ಶಿಕ್ಷಕರಿಂದ ತಿಳಿಯಿರಿ.

CUSEC:- Cubic feet per second.

TMC: Thousand Million Cubic Feet.

ಹೆಚ್ಚಿನ ಮಳೆಯಿಂದಾಗಿ 40000 ಕ್ಯೂಸೆಕ್ಸ್ ನೀರು ಅಣೆಕಟ್ಟೆಗೆ ಬಂದಿದೆ ಎಂದು ದಿನಪತ್ರಿಕೆಯೊಂದರಲ್ಲಿ ಬಂದಿರುತ್ತದೆ ಇದರ ಅರ್ಥವೇನು?

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 2
## ಸಸ್ಯಗಳ ವರ್ಗೀಕರಣ

Q5K7C9

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ : ಜೀವಿಗಳನ್ನು ಅವುಗಳ ಗುಣಲಕ್ಷಣಗಳ ಆಧಾರದ ಮೇಲೆ ವರ್ಗೀಕರಿಸುವರು.**

### ಚಟುವಟಿಕೆ 1 :

ವಿದ್ಯಾರ್ಥಿಗಳೇ, ನಿಮಗೆ ಇಲ್ಲಿ ಕೆಲವು ಜೀವಿಗಳ ಪಟ್ಟಿಯನ್ನು ನೀಡಲಾಗಿದೆ. ಇವುಗಳಲ್ಲಿ ಏಕಕೋಶ ಜೀವಿಗಳು, ಬಹುಕೋಶ ಜೀವಿಗಳು, ಸ್ವಪೋಷಕಗಳು, ಪರಪೋಷಕಗಳು, ಪರಾವಲಂಬಿಗಳು, ಸಸ್ಯಹಾರಿಗಳು, ಮಾಂಸಹಾರಿಗಳು, ಮಿಶ್ರಹಾರಿಗಳು, ಕೊಳೆತಿನಿಗಳು, ಅಂಡಜಗಳು, ಜರಾಯುಜಗಳು, ಅಕಶೇರುಕಗಳು ಮತ್ತು ಕಶೇರುಕಗಳನ್ನಾಗಿ ವರ್ಗೀಕರಿಸಿ.

ಜೀವಿಗಳ ಪಟ್ಟಿ: ಪಕ್ಷಿ, ಇಲಿ, ಬ್ಯಾಕ್ಟೀರಿಯಾ, ಜೇನುಹುಳು, ಅಮೀಬಾ, ಕಪ್ಪೆ, ಪ್ಯಾರಾಮೀಸಿಯಂ, ಶೈವಲಗಳು, ಸಸ್ಯಗಳು, ಹುಲಿ, ಮನುಷ್ಯರು, ನೀಲಿ ಹಸಿರು ಶೈವಲಗಳು, ಚಿರತೆ, ಜರಿ, ನಾಯಿ, ಶಿಲೀಂದ್ರಗಳು, ಬಾವಲಿ, ಜಂತು ಹುಳು, ಎಮ್ಮೆ, ಹೇನು, ಮಿಡತೆ, ಜಿಂಕೆ, ಸಿಂಹ, ಬೆಕ್ಕು, ಕುರಿ, ಕೊಕ್ಕೆ ಹುಳು, ಸೊಳ್ಳೆ, ನೊಣ, ಆಕ್ಟೋಪಸ್, ಮೇಕೆ, ಹಾವು, ನಕ್ಷತ್ರ ಮೀನು, ಜಿಗಣೆ, ಮೊಸಳೆ, ಹಲ್ಲಿ, ಜೇಡ, ಸೀಗಡಿ , ಕುದುರೆ ಮೀನು, ಚೇಳು ಬಸವನ ಹುಳು, ಜಿರಲೆ, ಸ್ಪಂಜು ಪ್ರಾಣಿ,ಹಸು, ಕುದುರೆ, ಹೈಡ್ರಾ, ಎರೆಹುಳು, ಚಿಟ್ಟೆ, ತಿಗಣೆ, ಕೋತಿ, ಮಿಡತೆ, ಇರುವೆ, ಓತಿಕ್ಯಾತ, ಮೀನುಗಳು

( ಒಂದೇ ಜೀವಿಯು ಒಂದಕ್ಕಿಂತ ಹೆಚ್ಚು ಗುಂಪುಗಳನ್ನು ಪ್ರತಿನಿಧಿಸುವ ಸಾಧ್ಯತೆ ಇದೆ. )
( ನಿಮ್ಮ ಶಿಕ್ಷಕರಿಂದ ಮಾಹಿತಿಯನ್ನು ಪಡೆದುಕೊಳ್ಳಬೇಕು )

| ಕ್ರ.ಸಂ | ಜೀವಿಗಳ ವರ್ಗೀಕರಣ | ಗುಂಪಿಗೆ ಸೇರುವ ಜೀವಿಗಳು |
|---|---|---|
| 1 | ಏಕ ಕೋಶ ಜೀವಿಗಳು | |
| 2 | ಬಹುಕೋಶ ಜೀವಿಗಳು | |
| 3 | ಸ್ವಪೋಷಕಗಳು | |
| 4 | ಪರಪೋಷಕಗಳು | |
| 5 | ಪರಾವಲಂಬಿಗಳು | |
| 6 | ಸಸ್ಯಹಾರಿಗಳು | |
| 7 | ಮಾಂಸಹಾರಿಗಳು | |
| 8 | ಮಿಶ್ರಹಾರಿಗಳು | |

© KTBS NOT TO BE REPUBLISHED

| | | |
|---|---|---|
| 9 | ಕೊಳೆತಿನಿಗಳು | |
| 10 | ಅಂಡಜಗಳು | |
| 11 | ಜರಾಯುಜಗಳು | |
| 12 | ಅಕಶೇರುಕಗಳು | |
| 13 | ಕಶೇರುಕಗಳು | |

ಮಕ್ಕಳೇ, ಪ್ರಾಣಿಗಳನ್ನು ಸಸ್ಯಹಾರಿಗಳು, ಮಾಂಸಹಾರಿಗಳು ಮತ್ತು ಮಿಶ್ರಹಾರಿಗಳನ್ನು ವೆನ್ನ ನಕ್ಷೆಯಲ್ಲಿ ತೋರಿಸಿ. ಶಿಕ್ಷಕರ ಮಾರ್ಗದರ್ಶನ ಪಡೆಯಿರಿ.



**ಚಟುವಟಿಕೆ 2 :**

ಮೇಲಿನ ಕೋಷ್ಟಕವನ್ನು ಭರ್ತಿ ಮಾಡಿರುವ ಆಧಾರದ ಮೇಲೆ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಏಕಕೋಶ ಜೀವಿಗಳನ್ನು ವರ್ಗೀಕರಿಸಲು ನಿನಗೆ ಸಹಾಯಕವಾದ ಅಂಶ ಯಾವುದು?

___________________________________________

___________________________________________

2. ಸ್ವಪೋಷಕ ಜೀವಿಗಳನ್ನು ಅವುಗಳ ಯಾವ ಗುಣದ ಆಧಾರದ ಮೇಲೆ ವರ್ಗೀಕರಿಸಲು ಸಾಧ್ಯವಾಯಿತು?

___________________________________________

___________________________________________

___________________________________________

3. ಅಕಶೇರುಕಗಳಿಗೂ ಮತ್ತು ಕಶೇರುಕಗಳಿಗೂ ಇರುವ ವ್ಯತ್ಯಾಸಗಳೇನು?

| ಅಕಶೇರುಕ | ಕಶೇರುಕ |
|---|---|
| | |

@KTBS NOT TO BE REPUBLISHED

## ಸಸ್ಯಗಳ ಗುಣಲಕ್ಷಣಗಳು

ಕಲಿಕಾ ಫಲ : ವರ್ಗೀಕರಣವು ನಿರ್ದಿಷ್ಟ ಗುಣಲಕ್ಷಣಗಳನ್ನು ಆಧರಿಸಿದೆ ಎಂದು ತಿಳಿಯುವರು.

**ಚಟುವಟಿಕೆ 1 :**

ಸಸ್ಯಗಳ ಸಾಮ್ಯತೆ, ಭಿನ್ನತೆ, ಆವಾಸ ಹಾಗೂ ಕಾರ್ಯ ಇತ್ಯಾದಿ ಗುಣಲಕ್ಷಣಗಳ ಆಧಾರದ ಮೇಲೆ ವರ್ಗೀಕರಣ ಮಾಡಲಾಗುತ್ತದೆ. ಸಸ್ಯಗಳನ್ನು ವಿವಿಧ ಗುಣಲಕ್ಷಣಗಳ ಆಧಾರದ ಮೇಲೆ ವರ್ಗೀಕರಿಸಬಹುದು. (ಉದಾಹರಣೆ: ಸಸ್ಯಗಳ ಬೀಜದಳಗಳ ಸಂಖ್ಯೆಗೆ ಅನುಗಣವಾಗಿ, ಏಕದಳ ಸಸ್ಯಗಳು ಮತ್ತು ದ್ವಿದಳ ಸಸ್ಯಗಳು ಎಂದು ವರ್ಗೀಕರಿಸಿದೆ)

1. ಸಸ್ಯಗಳನ್ನು ವರ್ಗೀಕರಿಸಬಹುದಾದ ಐದು ಗುಣಲಕ್ಷಣಗಳನ್ನು ತಿಳಿಸಿ.

| ಕ್ರ. ಸಂ. | ಗುಣಲಕ್ಷಣಗಳು |
|---|---|
| 1 | |
| 2 | |
| 3 | |
| 4 | |
| 5 | |

@KTBS NOT TO BE REPUBLISHED

2. ಮೇಲೆ ತಿಳಿಸಿದ ಯಾವುದಾದರೂ ಎರಡು ಗುಣಲಕ್ಷಣಗಳ ಆಧಾರದ ಮೇಲೆ ಸಸ್ಯಗಳನ್ನು ವರ್ಗಿಕರಿಸಿ.

ಉದಾಹರಣೆ – 1

| ಗುಣಲಕ್ಷಣ | ಗುಂಪು – 1 | ಗುಂಪು – 2 | ಗುಂಪು – 3 | ಗುಂಪು – 4 |
|---|---|---|---|---|
| ಬೀಜದಳಗಳ ಸಂಖ್ಯೆ | | | | |
| ಉದಾಹರಣೆ | | | | |

ಉದಾಹರಣೆ – 2

| ಗುಣಲಕ್ಷಣ | ಗುಂಪು – 1 | ಗುಂಪು – 2 | ಗುಂಪು – 3 | ಗುಂಪು – 4 |
|---|---|---|---|---|
| ಹೂವು | | | | |
| ಉದಾಹರಣೆ | | | | |

ಈ ಕೆಳಗಿನ ಚಿತ್ರಗಳನ್ನು ಗಮನಿಸಿ. ನಾಳ ಬಂಧ ವಿನ್ಯಾಸವನ್ನು ಗುರುತಿಸಿ.





| | |
|---|---|
| | |

© KTBS NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 3

## ಅನ್ವೇಷಣೆ–ಹೊಸತನದ ಹುಡುಕಾಟ

U6B7T2

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ : ಸರಳ ವಿಜ್ಞಾನದ ಪರಿಕಲ್ಪನೆಗಳನ್ನು ಅರಿಯಲು ಸರಳ ಸಂಶೋಧನಗಳನ್ನು ಕೈಗೊಳ್ಳುವರು.**

**ಚಟುವಟಿಕೆ 1:**

ವಿದ್ಯಾರ್ಥಿಗಳು ಈಗಾಗಲೇ ಹಿಂದಿನ ತರಗತಿಯಲ್ಲಿ ಓದಿರುವ ಬಲ ಮತ್ತು ಒತ್ತಡದ ಆಧಾರದ ಮೇಲೆ ಈ ಕೆಳಗೆ ನೀಡಿರುವ ವಸ್ತುಗಳು ತೇಲುತ್ತವೆಯೋ ಅಥವಾ ಮುಳುಗುತ್ತವೆಯೋ ಎಂಬುದನ್ನು ವರ್ಗೀಕರಿಸಿ.

| ಕ್ರಮ ಸಂಖ್ಯೆ | ವಸ್ತುಗಳು | ತೇಲುತ್ತವೆ | ಮುಳುಗುತ್ತವೆ |
|---|---|---|---|
| 1 | ಕಲ್ಲು | | |
| 2 | ಎಲೆ | | |
| 3 | ನಾಣ್ಯ | | |
| 4 | ಪ್ಲಾಸ್ಟಿಕ್ ತುಂಡು | | |
| 5 | ಪೆನ್ಸಿಲ್ | | |
| 6 | ಹೂವಿನ ದಳಗಳು | | |

@KTBS NOT TO BE REPUBLISHED

**ಚಟುವಟಿಕೆ 2:** ಕೆಳಗೆ ಕೊಟ್ಟಿರುವ ಕೋಷ್ಟಕವನ್ನು ಪೂರ್ತಿ ಮಾಡಿ:

| ಕ್ರ.ಸಂ | ವಸ್ತುಗಳು | ಆಕಾರ ಬದಲಾವಣೆ | ಚಲಿಸುತ್ತವೆ | ಉದ್ದವಾಗುತ್ತವೆ |
|---|---|---|---|---|
| 1 | ಸ್ಪಾಂಜ್ ಅನ್ನು ಕೈಯಿಂದ ಒತ್ತಿ | | | |
| 2 | ರಬ್ಬರ್ ಬ್ಯಾಂಡ್ ಅನ್ನು ಎಳೆಯಿರಿ | | | |
| 3 | ಆಟದ ಕಾರನ್ನು ತಳ್ಳಿರಿ | | | |
| 4 | ಗೋಧಿ ಹಿಟ್ಟನ್ನು ಕಲಸುವುದು | | | |
| 5 | ಸೈಕಲ್ ತುಳಿಯುವುದು | | | |
| 6 | ಸ್ಪ್ರಿಂಗ್ ಅನ್ನು ಎಳೆಯುವುದು | | | |

**ಚಟುವಟಿಕೆ 3:** ಕೊಟ್ಟಿರುವ ವಸ್ತುಗಳನ್ನು ಘನ ದ್ರವ ಮತ್ತು ಅನಿಲ ಸ್ಥಿತಿಗಳನ್ನಾಗಿ ವರ್ಗೀಕರಿಸಿ.

ಕಲ್ಲು, ನೀರು, ಹೈಡ್ರೋಜನ್, ರಕ್ತ, ಗಾಜು, ರಬ್ಬರ್, ಪಾದರಸ, ಕಾಫಿ, ಪೆನ್ನು, ಟೀ, ಪ್ಲಾಸ್ಟಿಕ್, ಮೀಥೇನ್, ಹೀಲಿಯಂ, ಹಾಲು, ಉಪ್ಪು, ಗಾಳಿ, ಮರದ ಮೇಜು, ತಂಪು ಪಾನೀಯಗಳು.

ಘನ:

______________________________

______________________________

ದ್ರವ:

______________________________

______________________________

ಅನಿಲ:

______________________________

______________________________

**ಚಟುವಟಿಕೆ 4 :** ಕೆಳಗೆ ಕೊಟ್ಟಿರುವ ರೇಖಾಚಿತ್ರಗಳನ್ನು ಗುರುತಿಸಿ.




______________________________

______________________________

______________________________

NOT TO BE REPUBLISHED
@KTBS

**ಚಟುವಟಿಕೆ 5:** ಕೆಳಗಿನ ಕೋಷ್ಟಕದಲ್ಲಿ ಧಾತು, ಸಂಯುಕ್ತ ಮತ್ತು ಮಿಶ್ರಣಗಳಿಗೆ ಸಂಬಂಧಿಸಿದಂತೆ ಉದಾಹರಣೆಗಳನ್ನು ನೀಡಿ.

| ಕ್ರಮ ಸಂಖ್ಯೆ | ಧಾತುಗಳು | ಸಂಯುಕ್ತಗಳು | ಮಿಶ್ರಣಗಳು |
|---|---|---|---|
| 1 | | | |
| 2 | | | |
| 3 | | | |
| 4 | | | |

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 4
## ಬರಿಗಣ್ಣಿಗೆ ನಿಲುಕದ ಜೀವ ಸಂಕುಲ – ಸೂಕ್ಷ್ಮಜೀವಿಗಳು

A2L1S7

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ : ವಿವಿಧ ಸೂಕ್ಷ್ಮಜೀವಿಗಳನ್ನು ವರ್ಗೀಕರಿಸುವರು**

ಚಟುವಟಿಕೆ 1 : ಈ ಕೆಳಗೆ ಕೊಟ್ಟಿರುವ ಜೀವಿಗಳನ್ನು ಬರೀ ಕಣ್ಣಿಗೆ ಕಾಣುವ ಮತ್ತು ಬರಿ ಕಣ್ಣಿಗೆ ಕಾಣದ ಜೀವಿಗಳನ್ನು ಕೋಷ್ಟಕದಲ್ಲಿ ಪಟ್ಟಿ ಮಾಡಿ.

ವೈರಸ್, ಬೆಕ್ಕು, ಪಕ್ಷಿಗಳು, ಅಮೀಬಾ, ಮಿಡತೆ, ಪ್ಯಾರಾ ಮೀಸಿಯಂ, ಹುಲಿ, ಆನೆ, ಶೈವಲ, ಸಿಂಹ, ಶಿಲೀಂದ್ರ, ಬ್ಯಾಕ್ಟೀರಿಯಾ, ನಾಯಿ .

| ಕ್ರಮ ಸಂಖ್ಯೆ | ಬರಿ ಕಣ್ಣಿಗೆ ಕಾಣುವ ಜೀವಿಗಳು | ಬರಿ ಕಣ್ಣಿಗೆ ಕಾಣದ ಜೀವಿಗಳು |
|---|---|---|
| 1 | | |
| 2 | | |
| 3 | | |
| 4 | | |
| 5 | | |

@KTBS NOT TO BE REPUBLISHED

ಈ ಮೇಲೆ ನೀಡಿರುವ ಚಟುವಟಿಕೆಯ ಆಧಾರದ ಮೇಲೆ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಸೂಕ್ಷ್ಮಜೀವಿಗಳು ಎಂದರೇನು ?
   ಉತ್ತರ:______________________________

2. ಸೂಕ್ಷ್ಮ ಜೀವಿಗಳಲ್ಲಿ ಎಷ್ಟು ವಿಧ? ಅವುಗಳನ್ನು ಪಟ್ಟಿ ಮಾಡಿ.
   ಉತ್ತರ:______________________________

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 5
## ಕಾಣದ ಜೀವಿಗಳು – ಮಹಾನ್ ಉಪಯೋಗಗಳು

D1R8Y6

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ : ದೈನಂದಿನ ಜೀವನದಲ್ಲಿ ವಿವಿಧ ಸೂಕ್ಷ್ಮ ಜೀವಿಗಳ ಅನ್ವಯಗಳನ್ನು ಗುರುತಿಸುವರು.**

ಚಟುವಟಿಕೆ 2 : ಈ ಮೇಲೆ ಪ್ರಶ್ನೆಗೆ ಉತ್ತರ ನೀಡಿರುವ ಆಧಾರದ ಮೇಲೆ ಈ ಕೆಳಗೆ ಕೊಟ್ಟಿರುವ ಜೀವಿಗಳನ್ನು ಶಿಲೀಂಧ್ರ–ಗಳು, ವೈರಸ್ ಗಳು, ಪ್ರೋಟೋಜೋವ ಮತ್ತು ಬ್ಯಾಕ್ಟೀರಿಯಗಳನ್ನಾಗಿ ವರ್ಗೀಕರಿಸಿ.
ಲ್ಯಾಕ್ಟೋ ಬ್ಯಾಸಿಲಸ್, ಇಕೊಲೈ, ಸಯನೋ ಬ್ಯಾಕ್ಟೀರಿಯ, ಈಸ್ಟ್, ಅಮೀಬಾ, ಪ್ಲಾಸ್ಮೋಡಿಯಂ, ಬೂಸ್ಟ್, ಕರೋನ, ಎಚ್ಐವಿ.

ಬ್ಯಾಕ್ಟೀರಿಯಾ ______________________________

ಶಿಲೀಂಧ್ರಗಳು ______________________________

ವೈರಸ್‌ಗಳು______________________________

ಪ್ರೋಟೊಜೋವಾ______________________________

@KTBS NOT TO BE REPUBLISHED

**ಈ ಕೆಳಗಿನ ಪ್ರಶ್ನೆಗಳಲ್ಲಿ ಬಿಟ್ಟ ಸ್ಥಳವನ್ನು ತುಂಬಿರಿ.**

1. ಸಸ್ಯ ತ್ಯಾಜ್ಯವನ್ನು ಪೋಷಕಾಂಶಯುಕ್ತ ಗೊಬ್ಬರವನ್ನಾಗಿ ಮಾಡುವ ಸೂಕ್ಷ್ಮ ಜೀವಿಗಳು ______________
2. ಪ್ರಾಣಿಗಳ ಸಗಣಿಯಂತಹ ತ್ಯಾಜ್ಯಗಳನ್ನೂ ಕೂಡ ವಿಭಜಿಸಬಲ್ಲ ಸೂಕ್ಷ್ಮ ಜೀವಿಗಳು ______________
3. ಪರಿಸರವನ್ನು ಸ್ವಚ್ಛಗೊಳಿಸಲು ಸಹಾಯ ಮಾಡುವ ವಿಶೇಷ ಬ್ಯಾಕ್ಟೀರಿಯವನ್ನು ಅಭಿವೃದ್ಧಿಪಡಿಸಿದ ವಿಜ್ಞಾನಿ ______________
4. ಯೀಸ್ಟ್ ಒಂದು ವಿಧದ ಸೂಕ್ಷ್ಮಜೀವಿಯಾಗಿ ______________ ಎಂದು ಕರೆಯಲ್ಪಡುವ ಸೂಕ್ಷ್ಮಜೀವಿಯ ಗುಂಪಿಗೆ ಸೇರಿದೆ .
5. ನಮ್ಮ ದೇಹಕ್ಕೆ ಅಗತ್ಯವಾದ ಜೀವಸತ್ವ ಬಿ – 12ರ ಉತ್ತಮ ಆಕರವಾಗಿರುವ ಸೂಕ್ಷ್ಮ ಶೈವಲ ______________

ಚಟುವಟಿಕೆ 3 : ಮೇಲಿನ ಎಲ್ಲಾ ಚಟುವಟಿಕೆಗಳ ಆಧಾರದ ಮೇಲೆ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.

1. ಆಹಾರ ತಯಾರಿಕೆಯಲ್ಲಿ ಬಳಸಲಾಗುವ ಸೂಕ್ಷ್ಮ ಜೀವಿಗಳ ಹೆಸರುಗಳನ್ನು ಬರೆಯಿರಿ.

______________________________

______________________________

2. ಔಷಧ ತಯಾರಿಕೆಯಲ್ಲಿ ಬಳಸಲಾಗುವ ಸೂಕ್ಷ್ಮಜೀವಿಗಳನ್ನು ಪಟ್ಟಿ ಮಾಡಿ.

3. ಕೃಷಿಗಳಲ್ಲಿ ಯಾವ ಸೂಕ್ಷ್ಮಜೀವಿಗಳನ್ನು ಬಳಸಿಕೊಂಡು ಉತ್ತಮ ಬೆಳೆಯನ್ನು ಬೆಳೆಯಬಹುದು ?

4. ಪರಿಸರ ಸ್ವಚ್ಛತೆಯನ್ನು ಕಾಪಾಡುವಲ್ಲಿ ಭಾಗಿಯಾಗುವ ಸೂಕ್ಷ್ಮ ಜೀವಿಗಳನ್ನು ಹೆಸರಿಸಿ.

@KTBS
NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 6
## ಉತ್ತಮ ಆರೋಗ್ಯಕ್ಕಾಗಿ – ಚಿಕಿತ್ಸಾ ವಿಧಾನಗಳು

Z9Q6G3

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ :** ಮಾನವರಲ್ಲಿ ಕಂಡು ಬರುವ ರೋಗಗಳು, ರೋಗಕಾರಕಗಳು ಹಾಗೂ ಚಿಕಿತ್ಸಾ ವಿಧಾನಗಳನ್ನು ತಿಳಿಯುವರು.

### ಚಟುವಟಿಕೆ 1 :

1. ಆರೋಗ್ಯ ಎಂದರೇನು?:

______________________________________________

______________________________________________

______________________________________________

______________________________________________

2. ನಾವು ಆರೋಗ್ಯವಾಗಿರಬೇಕಾದರೆ ರೂಢಿಸಿಕೊಳ್ಳಬೇಕಾದ ಕೆಲವು ಅಭ್ಯಾಸಗಳನ್ನು ಪಟ್ಟಿ ಮಾಡಿ.

______________________________________________

______________________________________________

______________________________________________

______________________________________________

______________________________________________

3. ಆರೋಗ್ಯಕರ ಜೀವನಶೈಲಿಯನ್ನು ಕಾಪಾಡಿಕೊಳ್ಳಲು ಕೆಲವು ಅಂಶಗಳನ್ನು ಸೂಚಿಸಿ.

______________________________________________

______________________________________________

______________________________________________

______________________________________________.

@KTBS NOT TO BE REPUBLISHED

### ಚಟುವಟಿಕೆ 2 :

ಈ ಮುಂದಿನ ಸ್ವಚ್ಛತಾ ಕಾರ್ಯಗಳನ್ನು ಪೂರ್ಣಗೊಳಿಸಲು ನೀವು ತೆಗೆದುಕೊಳ್ಳುವ ಅವಧಿಯ ಸಾಲಿನಲ್ಲಿ ಗುರುತು (✓) ಬರೆಯಿರಿ.

| ಕ್ರ.ಸಂ | ಸ್ವಚ್ಛತಾ ಕಾರ್ಯಗಳು | ಯಾವಾಗಲೂ | ದಿನಕ್ಕೆ ಒಂದು ಅಥವಾ ಎರಡು ಬಾರಿ | ವಾರದಲ್ಲಿ ಒಂದುಬಾರಿ | ಯಾವಾಗಲಾ-ದರೂ ಒಮ್ಮೆ | ಯಾವಾಗಲೂ ಇಲ್ಲ |
|---|---|---|---|---|---|---|
| 1 | ಹಲ್ಲು ಉಜ್ಜುವುದು | | | | | |
| 2 | ಸ್ನಾನ ಮಾಡುವುದು | | | | | |
| 3 | ಶೌಚಾಲಯ ಬಳಸಿದ ನಂತರ ಸಾಬೂನು ಬಳಸಿ ಕೈಗಳನ್ನು ತೊಳೆಯುವುದು. | | | | | |
| 4 | ಉಗುರುಗಳನ್ನು ಕತ್ತರಿಸುವದು. | | | | | |
| 5 | ಊಟಕ್ಕೂ ಮುಂಚೆ ಕೈಗಳನ್ನು ತೊಳೆಯುವುದು. | | | | | |
| 6 | ವ್ಯಾಯಾಮ ಮಾಡುವುದು. | | | | | |
| 7 | ಹೊರಾಂಗಣ ಆಟಗಳನ್ನು ಆಡುವುದು. | | | | | |

@KTBS NOT TO BE REPUBLISHED

- ನೀವು ರೂಢಿಸಿಕೊಂಡಿರುವ ಕೆಲವು ಉತ್ತಮ ನೈರ್ಮಲ್ಯ ಅಭ್ಯಾಸಗಳು ಯಾವುವು?

______________________________________________

______________________________________________

______________________________________________

______________________________________________

______________________________________________

- ನಮ್ಮ ದೇಹವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ಮುಖ್ಯ. ಏಕೆ?

______________________________________________

- ನಿಮ್ಮ ನೈರ್ಮಲ್ಯವನ್ನು ಸುಧಾರಿಸಲು ನೀವು ಯಾವ ಬದಲಾವಣೆಗಳನ್ನು ಮಾಡಲು ಬಯಸುವಿರಿ?

**ಚಟುವಟಿಕೆ 3 :**

1. ಗಾಳಿಯಿಂದ ಹರಡುವ ರೋಗಗಳು, ವೈರಸ್‌ನಿಂದ ಬರುವ ರೋಗಗಳು, ಬ್ಯಾಕ್ಟೀರಿಯಾದಿಂದ ಬರುವ ರೋಗಗಳು, ಪ್ರೋಟೋಜೋವಾದಿಂದ ಬರುವ ರೋಗಗಳು, ಪಟ್ಟಿ ಮಾಡಿ.

ಗಾಳಿಯಿಂದ ಹರಡುವ ರೋಗಗಳು: ____

ವೈರಸ್‌ನಿಂದ ಬರುವ ರೋಗಗಳು:

ಬ್ಯಾಕ್ಟೀರಿಯಾದಿಂದ ಬರುವ ರೋಗಗಳು:

ಪ್ರೋಟೋಜೋವಾದಿಂದ ಬರುವ ರೋಗಗಳು:

@KTBS NOT TO BE REPUBLISHED

**ಚಟುವಟಿಕೆ 4 :**

1. ಕೆಲವು ವಿಜ್ಞಾನಿಗಳ ಚಿತ್ರಗಳನ್ನು ನೀಡಿದೆ. ಅವರು ಯಾವ ಖಾಯಿಲೆಯನ್ನು ತಡೆಗಟ್ಟುವಲ್ಲಿ ಯಶಸ್ವಿಯಾಗಿದ್ದಾರೆ ಎಂದು ತಿಳಿಸಿ.

| | |
|---|---|
|  | ಎಡ್ವರ್ಡ್ ಜೆನ್ನರ್ |
|  | ಡಾ. ಕಮಲ್ ರಣದಿವೆ |
|  | ಡಾ. ಮಹಾರಾಜ್ ಕಿಶನ್ ಭಾನ್ |
|  | ಅಲೆಕ್ಸಾಂಡರ್ ಫ್ಲೆಮಿಂಗ್ |

@KTBS NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 7
## ವಿದ್ಯುತ್ – ಕಾಂತತ್ವ : ಒಂದು ಅದೃಶ್ಯ ನಂಟು

V1S2B3

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ : ವಿದ್ಯುತ್ ಪ್ರವಾಹದ ಕಾಂತೀಯ ಪರಿಣಾಮದ ಪ್ರಯೋಗ ಕೈಗೊಳ್ಳುವರು ಮತ್ತು ವಿವರಿಸುವರು.**

ನೀವು ಈಗಾಗಲೇ ವಿದ್ಯುತ್ ಘಂಟೆಯ ಬಗ್ಗೆ ಅಭ್ಯಾಸ ಮಾಡಿರುತ್ತೀರಿ. ಇದು ಒಂದು ವಿದ್ಯುತ್ ಕಾಂತವನ್ನು ಒಳ–ಗೊಂಡಿದೆ. ಒಂದು ಕ್ರೇನ್‌ನಲ್ಲಿಯೂ ಸಹ ಭಾರವಾದ ವಸ್ತುಗಳನ್ನು ಮೇಲೆತ್ತುವಷ್ಟು ಪ್ರಬಲವಾದ ವಿದ್ಯುತ್ ಕಾಂತವನ್ನು ಬಳಸುತ್ತಾರೆ. ನಿಮ್ಮ ಸುಗಮಕಾರರ ಸಹಾಯದಿಂದ ವಿದ್ಯುತ್ ಪ್ರವಾಹದಿಂದಾಗುವ ಈ ಪರಿಣಾಮವನ್ನು ಪ್ರಾಯೋಗಿಕವಾಗಿ ಮತ್ತೊಮ್ಮೆ ತಿಳಿಯಿರಿ.

**ಚಟುವಟಿಕೆ 1 :**

**ಸಲಕರಣೆಗಳು :** 1.5 V (ವೋಲ್ಟ್) ವಿದ್ಯುತ್ ಕೋಶ, ಪೆನ್ಸಿಲ್, ಮೊಳೆ, ಗುಂಡು ಸೂಜಿ, 4 ಅಡಿ ಉದ್ದದ ಅವಾಹಕ ಹೊದಿಕೆ ಇರುವ ತಾಮ್ರದ ತೆಳು ತಂತಿ.

**ಪ್ರಯೋಗದ ವಿಧಾನ:**

**ಹಂತ 1 :** ತಾಮ್ರದ ತಂತಿಯ ಎರಡು ತುದಿಗಳಿಂದ ಸುಮಾರು ಅರ್ಧ ಇಂಚು ಅವಾಹಕ ಹೊದಿಕೆಯನ್ನು ಬೇರ್ಪಡಿಸಿ ಇದೇ ರೀತಿ ತಂತಿಯ ಮಧ್ಯ ಭಾಗದಲ್ಲೂ ಸ್ವಲ್ಪ ಅವಾಹಕ ಹೊದಿಕೆಯನ್ನು ತೆಗೆಯಿರಿ. ತಂತಿಯ ತುದಿಯನ್ನು ಶುಷ್ಕ ಕೋಶದ ಎರಡೂ ಧ್ರುವಕ್ಕೂ ಜೋಡಿಸಿ. ಈಗ ತಂತಿಯ ಮಧ್ಯಭಾಗದಿಂದ ಗುಂಡು ಸೂಜಿ ಎತ್ತುವ ಪ್ರಯತ್ನ ಮಾಡಿ.



© KTBS NOT TO BE REPUBLISHED

1. ನೀವು ಏನನ್ನು ವೀಕ್ಷಿಸಿದಿರಿ?

______________________________

______________________________

______________________________

2. ಶುಷ್ಕ ಕೋಶದಿಂದ ಒಂದು ತಂತಿಯ ತುದಿಯ ಸಂಪರ್ಕ ತೆಗೆಯಿರಿ ಏನಾಯಿತು?

______________________________

______________________________

______________________________

______________________________

**ಹಂತ 2 :** ಈಗ ತಂತಿಯನ್ನು ಒಂದು ಪೆನ್ಸಿಲ್‌ಗೆ ಸುತ್ತಬೇಕು, ಸುತ್ತಿದ ಭಾಗದಲ್ಲಿ ಹೊದಿಕೆಯನ್ನು ಬೇರ್ಪಡಿಸಿರಬೇಕು. ತಂತಿಯ ಮುಕ್ತ ತುದಿಗಳನ್ನು ಶುಷ್ಕಕೋಶಕ್ಕೆ ಜೋಡಿಸಿ ಗುಂಡು ಸೂಜಿ ಎತ್ತುವ ಪ್ರಯತ್ನ ಮಾಡಿ.



ಅ. ಸುರುಳಿ ಸುತ್ತಿದ ತಾಮ್ರದ ತಂತಿಯ ಭಾಗದಲ್ಲಿ ಏನಾಯಿತು ?

___

ಆ. ಶುಷ್ಕ ಕೋಶದಿಂದ ತಂತಿಯ ತುದಿಯನ್ನು ಬೇರ್ಪಡಿಸಿದಾಗ ನೀವು ಗಮನಿಸಿದ್ದೇನು ?

___

© KTBS NOT TO BE REPUBLISHED

**ಹಂತ 3 :** ಈಗ ಒಂದು ಕಬ್ಬಿಣದ ಮೊಳೆಯನ್ನು ತೆಗೆದುಕೊಂಡು ತಂತಿಯನ್ನು ಮೊಳೆಯ ಸುತ್ತ ಸುರಳಿ ಆಕಾರದಲ್ಲಿ ಬಿಗಿಯಾಗಿ ಸುತ್ತಬೇಕು. ತಂತಿಯ ತುದಿಗಳನ್ನು ಶುಷ್ಕಕೋಶಕ್ಕೆ ಜೋಡಿಸಿ ಮತ್ತು ಕಬ್ಬಿಣದ ಮೊಳೆಯ ಸಮೀಪ ಗುಂಡು ಸೂಜಿಗಳನ್ನು ಇಡಬೇಕು.



ಅ. ಕಬ್ಬಿಣದ ಮೊಳೆ ಮತ್ತು ಗುಂಡು ಸೂಜಿಯ ನಡುವೆ ನೀವು ಏನನ್ನು ವೀಕ್ಷಿಸುವಿರಿ ?

___

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 8
## ತಂತಿಯ ಒಳಗಿನ ಶಾಖದ ರಹಸ್ಯ

V8B5I9

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ : ವಿದ್ಯುತ್ ವಾಹಕಗಳು ಮತ್ತು ಅವಾಹಕಗಳನ್ನು ಅವುಗಳ ಗುಣಲಕ್ಷಣಗಳ ಮೇಲೆ ವ್ಯತ್ಯಾಸಿಸುವರು.**

ಸಾಮಾನ್ಯವಾಗಿ ಎಲ್ಲಾ ವಸ್ತುಗಳು ತಮ್ಮ ಮೂಲಕ ವಿದ್ಯುತ್ ಹರಿಯಲು ಬಿಡುವುದಿಲ್ಲ ಎಂಬುದು ನಿಮಗೆ ತಿಳಿದಿದೆ. ವಿದ್ಯುತ್ತನ್ನು ಹರಿಯಲು ಬಿಡುವ ಅಂತಹ ವಸ್ತುಗಳನ್ನು ನಾವು ಎಚ್ಚರಿಕೆಯ ಕ್ರಮಗಳಿಂದ ಪರೀಕ್ಷಿಸಬಹುದು.

**ಚಟುವಟಿಕೆ 1 :** ಈ ಕೆಳಗಿನ ಸಾಮಗ್ರಿಗಳನ್ನು ಜೋಡಿಸಿಕೊಂಡು ಪರೀಕ್ಷಿಸಿರಿ.

**ಬೇಕಾಗುವ ಸಾಮಗ್ರಿಗಳು:** 1.5 V (ವೋಲ್ಟ್) ಶುಷ್ಕಕೋಶ, 8 ಇಂಚು ಉದ್ದದ 2 ತಾಮ್ರದ ತಂತಿ, ಒಂದು ಬಲ್ಬ್ ಮತ್ತು ಪರೀಕ್ಷಿಸಬೇಕಾದ ವಸ್ತುಗಳು. (ಕೋಷ್ಟಕದಲ್ಲಿ ಇರುವ ವಸ್ತುಗಳು)

**ಪರೀಕ್ಷಿಸುವ ವಿಧಾನ:** ಮೊದಲು ತಾಮ್ರದ ತಂತಿಯ ತುದಿಯಲ್ಲಿರುವ ಹೊದಿಕೆಯನ್ನು ಬೇರ್ಪಡಿಸಿಕೊಳ್ಳಿ ಎರಡೂ ತಂತಿಯ ತುದಿಗಳನ್ನು ಶುಷ್ಕಕೋಶದ ಧ್ರುವಗಳಿಗೆ ಜೋಡಿಸಿರಿ ಹಾಗೂ ಇನ್ನೊಂದು ತುದಿಯನ್ನು ಬಲ್ಬ್‌ಗೆ ಜೋಡಿಸಿ, ಬಲ್ಬ್ ಬೆಳಗುವುದನ್ನು ನೋಡಬಹುದು. ಈಗ ಶುಷ್ಕಕೋಶದ ಒಂದು ಧ್ರುವದ ಜೋಡಣೆಯನ್ನು ತೆಗೆಯಿರಿ. ನೀವು ಪರೀಕ್ಷಿಸಬೇಕಾದ ವಸ್ತುಗಳನ್ನು ಒಂದಾದ ನಂತರ ಒಂದರಂತೆ ತಂತಿಯ ಒಂದು ತುದಿ ಮತ್ತು ಶುಷ್ಕಕೋಶದ ಧ್ರುವಕ್ಕೂ ಚಿತ್ರದಲ್ಲಿ ತೋರಿಸಿರುವಂತೆ ಜೋಡಿಸಿ. ಬಲ್ಬ್ ಬೆಳಗುವುದೋ ಇಲ್ಲವೋ ವೀಕ್ಷಿಸಿ. ಪರೀಕ್ಷಿಸಿದ ವಸ್ತುಗಳ ಸ್ವಭಾವವನ್ನು ಕೋಷ್ಟಕದಲ್ಲಿ ದಾಖಲಿಸಿರಿ.

| ಕ್ರ.ಸಂ. | ಪರೀಕ್ಷಿಸ ಬೇಕಾದ ವಸ್ತುಗಳು | ವಾಹಕ/ಅವಾಹಕ |
|---|---|---|
| 1 | ಪ್ಲಾಸ್ಟಿಕ್ ಸ್ಕೇಲ್ | |
| 2 | ಲೋಹದ ಕೀಲಿ | |
| 3 | ಗಿಟಾರ್ ತಂತಿ | |
| 4 | ಒಣಗಿದ ಕಟ್ಟಿಗೆ | |
| 5 | ಪೆನ್ಸಿಲ್ ಮದ್ದು | |
| 6 | ಪಿನ್ | |
| 7 | ಪ್ಲಾಸ್ಟಿಕ್ ವೈರ್ | |
| 8 | ಗಾಜಿನ ಬಳೆ | |




©KTBS
NOT TO BE REPUBLISHED

**ತೀರ್ಮಾನ :** ನೀವು ಬಳಸಿದ ವಸ್ತುವು ವಿದ್ಯುತ್ ಮಂಡಲವನ್ನು ಪೂರ್ಣಗೊಳಿಸಿದಾಗ ____________ ಬೆಳಗುತ್ತದೆ. ಹಾಗಾಗಿ ಆ ವಸ್ತುಗಳನ್ನು __________ ಎನ್ನುವರು. ನೀವು ಬಳಸಿದ ವಸ್ತುಗಳಲ್ಲಿ ಬಲ್ಬ್ ಅನ್ನು ಬೆಳಗಿಸದ ವಸ್ತುಗಳು __________ ಏಕೆಂದರೆ ಅವು ಮಂಡಲವನ್ನು ______________.

**ವಿದ್ಯುತ್ ಪ್ರವಾಹದ ಉಷ್ಣೋತ್ಪನ್ನದ ಪರಿಣಾಮ ಆಧರಿಸಿದ ಸಾಧನಗಳನ್ನು ಗುರುತಿಸುವರು.**

**ಚಟುವಟಿಕೆ 2 :** ಕೊಟ್ಟಿರುವ ವಸ್ತುಗಳನ್ನು ವಾಹಕ ಮತ್ತು ಅವಾಹಕಗಳಾಗಿ ವಿಂಗಡಿಸಿ ಬರೆಯಿರಿ.

ಎಲೆ, ಶಟಲ್ ಕಾಕ್, ಒಣಗಿದ ಕಟ್ಟಿಗೆ, ಕಲ್ಲು ,ಅಲ್ಯೂಮಿನಿಯಮ್ ಮೊಳೆ, ಪಿಂಗಾಣಿ ಲೋಟ, ಲೋಹದ ಬಳೆ, ಚಿನ್ನದ ನಾಣ್ಯ, ತಾಮ್ರದ ಮೊಳೆ, ಸ್ಟೀಲ್ ಚಮಚ, ಪ್ಲಾಸ್ಟಿಕ್ ವೈರ್, ಕಾಗದ, ರಬ್ಬರ್ ಕಾರ್ಕ್, ಪೆನ್ನು, ಗಾಜು, ಪೆನ್ಸಿಲ್ ಮದ್ದು, ಮೇಣದಬತ್ತಿ, ನಾಣ್ಯ

| ವಾಹಕಗಳು | ಅವಾಹಕಗಳು |
|---|---|
| | |
| | |
| | |
| | |
| | |
| | |

@KTBS
NOT TO BE REPUBLISHED

**ಚಟುವಟಿಕೆ 3 :** ಅಭಿಷೇಕನು ಮನೆಯಲ್ಲಿ ರಾತ್ರಿ ಗೃಹ ಪಾಠ ಮಾಡುತ್ತಿರುವಾಗ ಇದ್ದಕ್ಕಿದ್ದಂತೆ ವಿದ್ಯುತ್ ಶಕ್ತಿಯ ಪೂರೈಕೆ ಇದ್ದಾಗಿಯೂ ಅವನ ಕೋಣೆಯ ಬಲ್ಬ್ ನಂದಿ ಹೋಗುವುದನ್ನು ಗಮನಿಸುತ್ತಾನೆ. ತಕ್ಷಣ ಅವನು ಸ್ವಿಚ್ ಆಫ್ ಮಾಡಿ ಬಲ್ಬ್ ಅನ್ನು ಬದಲಾಯಿಸಲು ಆತುರದಲ್ಲಿ ಬರಿ ಕೈಯಲ್ಲಿ ಬಲ್ಬನ್ನು ಸ್ಪರ್ಶಿಸುತ್ತಾನೆ. ಬಲ್ಬನ್ನು ಸ್ಪರ್ಶಿಸುತ್ತಿದ್ದಂತೆ ಕಿರುಚಿ ತನ್ನ ಕೈಯನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಾನೆ. ಏನಾಗಿದೆ ಎಂದು ಅವನ ತಾಯಿ ಓಡಿ ಕೋಣೆಗೆ ಬಂದಾಗ ಅವನು 'ಬಲ್ಬ್ ಬಿಸಿಯಾಗಿರುವುದು ತಿಳಿದಿರಲಿಲ್ಲ ಅದನ್ನು ಬದಲಾಯಿಸುವ ಪ್ರಯತ್ನ ಮಾಡಿದಾಗ ನನಗೆ ಕೈ ಬಿಸಿಯಾಯಿತು' ಎಂದನು.

1. ಬಲ್ಬ್ ಬಿಸಿಯಾಗಲು ಕಾರಣವೇನು?

______________________________________

______________________________________

______________________________________

______________________________________

______________________________________

ಈ QR ಕೋಡ್ ಸ್ಕ್ಯಾನ್ ಮಾಡಿ ನೋಡಿ

2. ಇಲ್ಲಿ ವಿದ್ಯುತ್ ಶಕ್ತಿಯು ಯಾವ ರೂಪದ ಶಕ್ತಿಯಾಗಿ ಬದಲಾಗಿದೆ?

______________________________________

______________________________________

______________________________________

**ಚಟುವಟಿಕೆ 4 :**

ಉಷ್ಣ ಶಕ್ತಿಯು ಶಕ್ತಿಯ ಒಂದು ರೂಪವೆಂದು ತಿಳಿದಿದೆ. ಹಾಗಾದರೆ ಉಷ್ಣ ಶಕ್ತಿ ಗಾಗಿ ನಾವು ಯಾವ ಯಾವ ಉಪಕರ–ಣಗಳನ್ನು ಬಳಸಬಹುದು ಎಂಬುದನ್ನು ಕೊಟ್ಟಿರುವ ಗೃಹ ಸಲಕರಣೆಗಳಲ್ಲಿ  ಗುರುತಿಸಿರಿ.

| | |
|---|---|
|  |  |
|  |  |
|  |  |

@KTBS NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 9

## ಬಲಗಳ ಜುಗಲ್‌ಬಂದಿ – ಸಂಪರ್ಕ ಬಲ ಮತ್ತು ಸಂಪರ್ಕರಹಿತ ಬಲ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ
U6Z8A3

**ಕಲಿಕಾಫಲ :** ಸಂಪರ್ಕ ಬಲ ಮತ್ತು ಸಂಪರ್ಕರಹಿತ ಬಲಗಳ ನಡುವಿನ ವ್ಯತ್ಯಾಸಗಳನ್ನು ಪಟ್ಟಿ ಮಾಡುವರು.

**ಚಟುವಟಿಕೆ 1:** ಈ ಕೆಳಗಿನ ರೇಖಾನಕ್ಷೆಯನ್ನು ಪೂರ್ಣಗೊಳಿಸಿ




@KTBS NOT TO BE REPUBLISHED

**ಚಟುವಟಿಕೆ 2 :** "ಅ" ಪಟ್ಟಿಯಲ್ಲಿರುವ ಅಂಶಗಳನ್ನು ಗಮನಿಸಿ "ಬ" ಪಟ್ಟಿಯಲ್ಲಿರುವ ಅಂಶಗಳೊಂದಿಗೆ ಜೋಡಿಸಿ ಹೊಂದಿಸಿ ಬರೆಯಿರಿ

| | ಅ ಪಟ್ಟಿ | | ಬ ಪಟ್ಟಿ | ಅ | ಬ |
|---|---|---|---|---|---|
| 1 | ಸ್ನಾಯು ಬಲ | ಎ | ವಾಹನಗಳ ಟೈರ್ ಸವೆಯುವುದು | 1 | ..... |
| 2 | ಘರ್ಷಣಾ ಬಲ | ಬಿ | ಉಣ್ಣೆಗೆ ಉಜ್ಜಿದ ಪ್ಲಾಸ್ಟಿಕ್ ಪೈಪ್ ಹಾಳೆಯನ್ನು ಆಕರ್ಷಿಸುತ್ತದೆ | 2 | ..... |
| 3 | ಕಾಂತೀಯ ಬಲ | ಸಿ | ಬಾಲಕನು ಬೈಸಿಕಲ್ ಪೆಡಲ್ ಮಾಡುತ್ತಾನೆ | 3 | ..... |
| 4 | ಸ್ಥಾಯಿ ವಿದ್ಯುತ್ ಬಲ | ಡಿ | ಸೂರ್ಯನ ಸುತ್ತ ಗ್ರಹಗಳು ಸುತ್ತುತ್ತವೆ | 4 | ..... |
| 5 | ಗುರುತ್ವಾಕರ್ಷಣ ಬಲ | ಇ | ಕಬ್ಬಿಣದ ರಜಗಳು ಕಾಂತದೆಡೆಗೆ ಚಲಿಸುತ್ತವೆ | 5 | ..... |

**ಚಟುವಟಿಕೆ 3 :** ಮೊದಲೆರಡು ಅಂಶಗಳಗಿರುವ ಸಂಬಂಧವನ್ನು ಸರಿಯಾಗಿ ಗಮನಿಸಿ ಅದರಂತೆಯೇ ಮೂರು ಮತ್ತು ನಾಲ್ಕನೇ ಅಂಶಗಳ ನಡುವಿನ ಹೋಲಿಕೆಯನ್ನು ಹೋಲಿಸಿ ಗುರುತಿಸಿ ಬರೆಯಿರಿ.

1. ಸ್ನಾಯು ಬಲ : ಸಂಪರ್ಕ ಬಲ :: ಗುರುತ್ವಾಕರ್ಷಣ ಬಲ : ...........................
2. ವಸ್ತುಗಳ ಮೇಲ್ಮೈ ಸಂಪರ್ಕದಲ್ಲಿದ್ದರೆ : ಸಂಪರ್ಕ ಬಲ :: ............................ : ಸಂಪರ್ಕರಹಿತ ಬಲ
3. ಸಜಾತೀಯ ಧ್ರುವಗಳು : ವಿಕರ್ಷಣೆ :: ವಿಜಾತಿಯ ಧ್ರುವಗಳು : .......................
4. ಆಕರ್ಷಣೆ ಮತ್ತು ವಿಕರ್ಷಣೆ : ಕಾಂತೀಯ ಬಲ :: ಆಕರ್ಷಣೆ ಮಾತ್ರ : ..................
5. ಮೀನು ಈಜುವುದು : ಸ್ನಾಯು ಬಲದಿಂದ :: ಭೂಮಿಯ ಸುತ್ತ ಚಂದ್ರನ ಚಲನೆ : .........................
6. ಮಿಂಚು : ಸ್ಥಾಯಿ ಸಿದ್ಯುತ್ ಬಲ :: ಮೇಲೆಸೆದ ಕಲ್ಲು ಕೆಳಗೆ ಬೀಳುವುದು : ...............................

**ಈ ಕೆಳಗಿನವುಗಳನ್ನು ವ್ಯಾಖ್ಯಾನಿಸಿ**

| | |
|---|---|
| ಸ್ನಾಯು ಬಲ | |
| ಘರ್ಷಣಾ ಬಲ | |
| ಕಾಂತೀಯ ಬಲ | |
| ಸ್ಥಾಯಿ ವಿದ್ಯುತ್ ಬಲ | |
| ಗುರುತ್ವಾಕರ್ಷಣ ಬಲ | |

@KTBS
NOT TO BE REPUBLISHED

# ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 10

## ಘರ್ಷಣೆ – ಚಲನೆಯ ಮೌನ ವಿರೋಧಿ

X3W4P5

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ : ದೈನಂದಿನ ಜೀವನದಲ್ಲಿ ಘರ್ಷಣೆಯ ಪ್ರಾಮುಖ್ಯತೆಯನ್ನು ಅರಿಯುವರು.**

**ಚಟುವಟಿಕೆ 1 :** ವಿದ್ಯಾರ್ಥಿಗಳೇ, ಕೆಳಗಿನ ಚಿತ್ರಗಳನ್ನು ಗಮನಿಸಿ. ನಮ್ಮ ಅನುಕೂಲಕ್ಕೆ ತಕ್ಕಂತೆ ಕೆಲವು ಸಂದರ್ಭಗಳಲ್ಲಿ ಘರ್ಷಣೆಯನ್ನು ಹೆಚ್ಚಿಸಲಾಗಿದೆ ಮತ್ತು ಕೆಲವು ಸಂದರ್ಭಗಳಲ್ಲಿ ಘರ್ಷಣೆಯನ್ನು ಕಡಿಮೆ ಮಾಡಲಾಗಿದೆ. ಏಕೆ ಎಂಬುದನ್ನು ಚಿತ್ರಕ್ಕೆ ಸರಿ ಹೊಂದುವಂತೆ ಯೋಚಿಸಿ ಬರೆಯಿರಿ

| ಚಿತ್ರಗಳು | ಮಾಡಲಾದ ಬದಲಾವಣೆ | ಘರ್ಷಣೆಯನ್ನು ಹೆಚ್ಚಿಸಲಾಗಿದೆ/ಕಡಿಮೆ ಮಾಡಲಾಗಿದೆ ಏಕೆ? |
|---|---|---|
|  | ಎಳೆಯಲು ಗಾಲಿಯ ಬಳಕೆ | |
|  | ಅಡ್ಡ,ಉದ್ದ ಉಬ್ಬು ತಗ್ಗು ಮಾಡಿರುವುದು | |
|  | ಅಡ್ಡ,ಉದ್ದ ಉಬ್ಬು ತಗ್ಗು ಮಾಡಿರುವುದು | |
|  | ಶಾಕ್ ಅಬ್ಸಾರ್ಬ್ ರ್ ಬಳಸಿರುವುದು | |
|  | ನಯವಾದ ಪುಡಿ ಹಾಕಿರುವುದು | |

NOT TO BE REPUBLISHED @KTBS

| | | |
|---|---|---|
|  | ಅಪಕರ್ಷಕ ತೈಲವನ್ನು ಇಂಜಿನ್ ಗೆ ಹಾಕಿರುವುದು | |
|  | ದೋಣಿಯ ಆಕಾರ ಎರಡೂ ತುದಿಯಲ್ಲಿ ಚೂಪಾಗಿದೆ | |
|  | ಬಾವಿಯಿಂದ ನೀರು ಮೇಲೆ-ತ್ತುವ ಹಗ್ಗಕ್ಕೆ ಗಾಲಿ ಜೋಡಿ-ಸಿರುವುದು | |

**ಚಟುವಟಿಕೆ 2 :** ಈ ಕೆಳಗಿನ ಸರಳ ಪ್ರಶ್ನೆಗಳಿಗೆ ಉತ್ತರಿಸಿ.
(ನಿಮ್ಮ ಸ್ನೇಹಿತರು/ಸುಗಮಕಾರರು/ಹಿರಿಯರೊಂದಿಗೆ ಚರ್ಚಿಸಿ ಬರೆಯಿರಿ.)

1. ಪೆನ್ ಹಿಡಿಯಲು ಘರ್ಷಣೆ ಅಗತ್ಯ ಹೌದೇ? ಹೇಗೆ?

   ..........................................................................................

   ..........................................................................................

2. ನಯವಾದ ಗ್ರಾನೈಟ್ ಕಲ್ಲಿನ ಮೇಲೆ ನಡೆಯುವಾಗ ಜಾರುತ್ತೇವೆ? ಏಕೆ?

   ..........................................................................................

   ..........................................................................................

   ..........................................................................................

3. ವಿಮಾನದ ಮುಂಭಾಗದ ತುದಿ ಮೊನಚಾಗಿ ಮಾಡಿರುವ ಉದ್ದೇಶವೇನು?

   ..........................................................................................

   ..........................................................................................

   ..........................................................................................

4. ಕಿಟಕಿ ಬಾಗಿಲಿನ ಕದಗಳು ಮುಚ್ಚುವಾಗ ಮತ್ತು ತೆರೆಯುವಾಗ ಶಬ್ದ ಮಾಡುತ್ತಿದ್ದರೆ ಅದನ್ನು ಹೇಗೆ ತಡೆಯುವಿರಿ?

   ..........................................................................................

   ..........................................................................................

5. ಮತ್ಸ್ಯಾಗಾರದ ನೀರಿನಲ್ಲಿರುವ ಮೀನುಗಳನ್ನು ಹಿಡಿಯಲು ಪ್ರಯತ್ನಿಸಿರುವಿರೇ? ಮೀನುಗಳ ಜಾರಿ ಹೋಗುವವು ಅಲ್ಲವೇ? ಇದಕ್ಕೆ ಕಾರಣವನ್ನು ಊಹಿಸುವಿರಾ?

   ..........................................................................................

   ..........................................................................................

©KTBS NOT TO BE REPUBLISHED

**ಚಟುವಟಿಕೆ 3 :** ಈ ಕೆಳಗಿನ ರೇಖಾ ನಕ್ಷೆಯನ್ನು ಪೂರ್ಣಗೊಳಿಸಿ.




@KTBS NOT TO BE REPUBLISHED

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 11
## ಗಾಳಿಯ ಓಟ – ಮಾರುತ , ಬಿರುಗಾಳಿ ಮತ್ತು ಚಂಡಮಾರುತ

K7A9Z9

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ : ವಾತಾವರಣದಲ್ಲಿ ಉಂಟಾಗುವ ವಿವಿಧ ವಿದ್ಯಮಾನಗಳನ್ನು ಗುರುತಿಸುವರು.**

**ಚಟುವಟಿಕೆ 1 :**

ಈ ಕೆಳಗಿನ ರೇಖಾನಕ್ಷೆಯನ್ನು ಪೂರ್ಣಗೊಳಿಸಿ. ಭೂಮಿಯು ಜೀವಿಗಳ ಆವಾಸಸ್ಥಾನವಾಗಿದೆ. ಜೀವಿಗಳಿಗೆ ಅಗತ್ಯವಾದ ಮೂಲಭೂತ ಅಂಶಗಳನ್ನೊಳಗೊಂಡಿದೆ. ಅವುಗಳನ್ನು ಈ ಕೆಳಗೆ ಕೊಟ್ಟಿರುವ ಸ್ಥಳಗಳಲ್ಲಿ ಬರೆಯಿರಿ.

(ಭೂಮಿಯ ಮೇಲಿನ ಗಾಳಿಯ ಪದರವನ್ನು ವಾಯುಗೋಳ ಎಂದು ಕರೆಯಬಹುದಾದರೆ ಮಣ್ಣು ಹಾಗೂ ನೀರಿನ ಪದ–ರಗಳನ್ನು ಊಹಿಸಿ)




@KTBS NOT TO BE REPUBLISHED

**ಚಟುವಟಿಕೆ 2 :**

ಮಕ್ಕಳೇ ಗಾಳಿಯು ಚಲಿಸಲು ಕಾರಣವೇನು? ಸೂರ್ಯನ ಅಸಮವಾದ ಶಾಖ ಹಂಚಿಕೆಯಲ್ಲವೇ? ಭೂಮಿಯ ಮೇಲ್ಮೈ ಮೇಲೆ ಸೂರ್ಯನ ಶಾಖವು ಎಲ್ಲೆಡೆ ಸಮನಾಗಿ ಹಂಚಿಕೆಯಾಗಿಲ್ಲ. ಈ ಉಷ್ಣಾಂಶದ ವ್ಯತ್ಯಾಸದಿಂದಾಗಿ ವಾಯು ಭಾರದಲ್ಲಿ ಏರುಪೇರಾಗುತ್ತದೆ. ಇದು ಗಾಳಿಯ ಚಲನೆಗೆ ಕಾರಣವಾಗುತ್ತದೆ. ಬೀಸುವ ಗಾಳಿಗೆ ಮಾರುತ ಎನ್ನುತ್ತಾರೆ. ಹಾಗಾದರೆ ಮಾರುತಗಳ ವಿಧಗಳನ್ನು ನಿಮ್ಮ ಹಿರಿಯರ / ಗುರುಗಳ ಮಾರ್ಗದರ್ಶನದಲ್ಲಿ ಪಟ್ಟಿಮಾಡಿ ಮತ್ತು ವಿವರಿಸಿ. ಒಂದನ್ನು ನಿಮಗಾಗಿ ನೀಡಿದೆ.

| | | | |
|---|---|---|---|
| ನಿರಂತರ ಮಾರುತಗಳು | ........................ | ಸ್ಥಳೀಯ ಮಾರುತಗಳು | ........................ |
| ಉದಾ :–ಧ್ರುವೀಯ ಮಾ–ರುತಗಳು | ಇವು ಒಂದು ನಿರ್ದಿ–ಷ್ಟ ಅವಧಿಯಲ್ಲಿ ಅಥವಾ ಋತುವಿನಲ್ಲಿ ತಮ್ಮ ದಿಕ್ಕ–ನ್ನು ಬದಲಿಸುತ್ತವೆ. ಉದಾ: ಮಾನ್ಸೂನ್ ಮಾರುತಗಳು | ಉದಾ: ನೆಲಗಾಳಿ, ಕಡಲ್ಗಾಳಿ | ಇವು ದಿಕ್ಕು ಮತ್ತು ವೇ–ಗದಲ್ಲಿ ಸ್ಥಿರತೆ ಹೊಂದಿಲ್ಲ ಉದಾ : ಸುಂಟರಗಾಳಿ |

**ಹಾಗೆ ಸುಮ್ಮನೆ:–** ಮಾರುತಗಳ ವೇಗವನ್ನು ಅಳೆಯಲು ಅನಿಮೋಮೀಟರ್ ಬಳಸುವರು
ಮಾರುತಗಳ ದಿಕ್ಕನ್ನು ಅರಿಯಲು ವಿಂಡ್ ವೇನ್ ಬಳಸುವರು.

**ಚಟುವಟಿಕೆ 3 :** ಕೊಟ್ಟಿರುವ ಸುಳಿಹುಗಳನ್ನು ಬಳಸಿ ಕೋಷ್ಟಕದಲ್ಲಿ ತುಂಬಿ. (ಅಮೆರಿಕಾದ ರಾಕಿ ಪರ್ವತದ ಮೇಲೆ ಬೀಸುವ ಬೆಚ್ಚಗಿನ ಗಾಳಿ, ಯುರೋಪ್‌ನ ಆಲ್ಫ್ ಪರ್ವತದ ಮೇಲೆ ಬೀಸುವ ಬೆಚ್ಚಗಿನ ಗಾಳಿ, ಫ್ರಾನ್ಸನಲ್ಲಿ ಸಮುದ್ರದ ಕಡೆಗೆ ಬೀಸುವ ತೇವಾಂಶಯುಕ್ತ ಗಾಳಿ.)

| ಸ್ಥಳೀಯ ಮಾರುತಗಳು | ವಿವರಣೆ |
|---|---|
| ಲೂ | ಉತ್ತರ ಭಾರತದ ಬಯಲು ಸೀಮೆಯಲ್ಲಿ ಬೀಸುವ ಬಿಸಿ ಗಾಳಿ |
| ಚಿನೂಕ್ | |
| ಫೋನ್ | |
| ಮಿಸ್ಟ್ರಲ್ | |

@KTBS NOT TO BE REPUBLISHED

IMD:- Indian meteorological Department ಇದರ ಕುರಿತು ಮಾಹಿತಿ ಸಂಗ್ರಹಿಸಿ

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 12
## ವಿನಾಶದ ಸುಳಿಗಾಳಿ – ಚಂಡಮಾರುತ

L8V3A3

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ : ವಿದ್ಯಾರ್ಥಿಗಳು ಪಳೆಯುಳಿಕೆ ಇಂಧನಗಳ ಪ್ರಾಮುಖ್ಯತೆಯನ್ನು ಅರಿಯುವರು.**

**ಚಟುವಟಿಕೆ 1 :** ಬಿರುಗಾಳಿ ಹಾಗೂ ಚಂಡಮಾರುತಗಳಿಗಿರುವ ವ್ಯತ್ಯಾಸಗಳನ್ನು ಪಟ್ಟಿಮಾಡಿ

| ಬಿರುಗಾಳಿ | ಚಂಡಮಾರುತ |
|---|---|
| ನೆಲ ಹಾಗೂ ಜಲ ಎರಡರ ಮೇಲೂ ಉಂಟಾಗುತ್ತದೆ | ಜಲ ಅಂದರೆ ಸಮುದ್ರದ ಮೇಲ್ಮೈ ಮೇಲೆ ಉಂಟಾಗುತ್ತದೆ |
| ಕಡಿಮೆ ಸಮಯದವರೆಗೆ ಮಾತ್ರ ಇರುತ್ತವೆ | |
| ಗುಡುಗು, ಮಳೆ ಜೊತೆಯಾಗಿ ಇರಬಹುದು ಅಥವಾ ಇಲ್ಲ–ದಿರಬಹುದಾಗಿದೆ | |
| ಬಹಳ ಹಾನಿ ಮಾಡಿರಬಹುದು | |

@KTBS NOT TO BE REPUBLISHED

**ಚಟುವಟಿಕೆ 2 :** ಮಕ್ಕಳೇ, ಈ ಕೆಳಗಿನ ಉಪಕರಣಗಳನ್ನು ಪತ್ತೆಮಾಡಿ. ನಿಮ್ಮ ಹಿರಿಯರ / ಸುಗಮಕಾರರ ಮಾರ್ಗದರ್ಶ–ನದಲ್ಲಿ ಪಟ್ಟಿಮಾಡಿ ಮತ್ತು ಉಪಯೋಗಗಳನ್ನು ಕೋಷ್ಟಕದಲ್ಲಿ ಪಟ್ಟಿಮಾಡಿ.

| ಕ್ರಸಂ | ಉಪಕರಣದ ಚಿತ್ರ | ಉಪಕರಣದ ಹೆಸರು | ಉಪಕರಣದ ಉಪಯೋಗ |
|---|---|---|---|
| 1 |  | | |
| 2 |  | | |

| | | | |
|---|---|---|---|
| 3 |  | | |

**ಚಟುವಟಿಕೆ 3 :** ಮಕ್ಕಳೇ ಇಂತಹ ಚಿತ್ರಗಳನ್ನು ನೀವು ಟಿ ವಿ ಮತ್ತು ವೃತ್ತಪತ್ರಿಕೆಗಳಲ್ಲಿ ಗಮನಿಸಿರುತ್ತೀರಿ. ಇವು ಏನೆಂಬುದನ್ನು ತಿಳಿಯಿರಿ ಮತ್ತು ಸಂಕ್ಷಿಪ್ತವಾಗಿ ಬರೆಯಿರಿ.

| | |
|---|---|
|  | |
|  | |

©KTBS NOT TO BE REPUBLISHED

ಚಂಡಮಾರುತಗಳು ಅಪಾರ ಪ್ರಮಾಣದ ಜೀವ ಹಾನಿ ಹಾಗೂ ಆಸ್ತಿ ನಾಶಮಾಡಿರುವುದನ್ನು ಕೇಳಿರುತ್ತೀರಿ ಅಲ್ಲವೇ? ವೃತ್ತಪತ್ರಿಕೆಗಳ ವರದಿಯನ್ನು ಸಂಗ್ರಹಿಸಿ.

ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 13

# ಚಂಡಮಾರುತ – ಜಾಗೃತಿಯೇ ಜೀವ ರಕ್ಷೆ

Q2T4HZ

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

ಕಲಿಕಾಫಲ : ನೈಸರ್ಗಿಕ ವಿಕೋಪಗಳಿಂದ ರಕ್ಷಿಸಿಕೊಳ್ಳುವ ಕುರಿತು ಜಾಗೃತಿ ಹೊಂದುವರು.

**ಚಟುವಟಿಕೆ 1 :**

ವಾಯುಭಾರ ಕುಸಿತ ಹೇಗೆ ಉಂಟಾಗುತ್ತದೆ? ಬಾರೋ ಮೀಟರ್ ಎಂದರೇನು? ಚಿತ್ರದ ಸಹಾಯದಿಂದ ವಿವರಿಸಿ.







@KTBS NOT TO BE REPUBLISHED

..........................................................................................

..........................................................................................

..........................................................................................

ಜೋರಾಗಿ ಮಳೆ ಬಂದಂತಹ ಸಂದರ್ಭದಲ್ಲಿ ನಿಮ್ಮನ್ನು ಹೇಗೆ ರಕ್ಷಿಸಿಕೊಳ್ಳುತ್ತೀರಿ? ನಾಲ್ಕು ವಾಕ್ಯಗಳಲ್ಲಿ ಬರೆಯಿರಿ.

..........................................................................................

..........................................................................................

ಹಾಗಾದರೆ ಚಂಡಮಾರುತ /ಬಿರುಗಾಳಿ ಬಂದಂತಹ ಸಂದರ್ಭಗಳಲ್ಲಿ ನಿಮ್ಮನ್ನು ಹೇಗೆ ರಕ್ಷಿಸಿಕೊಳ್ಳುತ್ತೀರಿ? ಮನೆಯಲ್ಲಿನ ಹಿರಿಯರ/ ಸುಗಮಕಾರರ ಮಾರ್ಗದರ್ಶನದಲ್ಲಿ ಪಟ್ಟಿಮಾಡಿ. (ರೇಡಿಯೋ, ಟಿವಿಗಳಲ್ಲಿ ಹವಾಮಾನ ಇಲಾಖೆಯವರು ಆಗಾಗ ಹೊರಡಿಸುವ ಪ್ರಕಟಣೆಯನ್ನು ಕೇಳಿದ್ದೀರಿ ಅಲ್ಲವೇ?)

..........................................................................................

..........................................................................................

..........................................................................................

..........................................................................................

ಹೊರಗೆ ನಿಲ್ಲುವುದು. ಮನೆಯ ಮೇಲ್ಚಾವಣಿ ಮೇಲೆ ಓಡಾಡುವುದು. ಮೈದಾನದಲ್ಲಿ ಆಡುವುದು. ಬೈಕ್ ಮೇಲೆ ಜಾಲಿ ರೈಡಿಂಗ್ ಹೋಗುವುದು. ಮೀನುಗಾರಿಕೆ ಮಾಡುವುದು. ಮನೆಯಲ್ಲಿ ಊಟ ಮಾಡುವುದು. ಮನೆ ಒಳಗೆ ಇರುವುದು. ಕಾರ್‌ನಲ್ಲಿ ಹೋಗುವುದು. ಕಬ್ಬಿಣದ ವಸ್ತುಗಳನ್ನು ಮುಟ್ಟದಿರುವುದು, ಮರದ ಕೆಳಗೆ ನಿಲ್ಲುವುದು ಮಿಂಚು ಬಂಧಕದ ಹತ್ತಿರ ಇರುವುದು. ವಿದ್ಯುತ್ ಕಂಬದ ಬಳಿ ನಿಲ್ಲುವುದು. ವಿದ್ಯುತ್ ರಿಪೇರಿ ಮಾಡುವುದು. ಮನೆ ಒಳಗೆ ಓಡಾಡುವುದು.

**ಚಟುವಟಿಕೆ 2 :** ಬಾಕ್ಸ್‌ನಲ್ಲಿರುವ ಅಂಶಗಳನ್ನು ಬಳಸಿಕೊಂಡು ಜೋರಾಗಿ ಮಳೆ ಬಂದಂತಹ ಸಂದರ್ಭದಲ್ಲಿ/ಸೈಕ್ಲೋನ್ ಉಂಟಾದ / ಮಿಂಚು ಬಂದ ಸಂದರ್ಭದಲ್ಲಿ ಏನು ಮಾಡಬಹುದು? ಮತ್ತು ಏನು ಮಾಡಬಾರದು? ಎಂಬುದನ್ನು ಈ ಕೆಳಗಿನ ಕೋಷ್ಟಕದಲ್ಲಿ ತುಂಬಿ.

| ಮಾಡಬಹುದು (Do's) | ಮಾಡಬಾರದು (Dont's) |
|---|---|
| | |
| | |
| | |
| | |
| | |

@KTBS NOT TO BE REPUBLISHED

**ಚಟುವಟಿಕೆ 3 :** ಈ ಕೆಳಗಿನ ಪ್ರಶ್ನೆಗಳಿಗೆ ಯೋಚಿಸಿ ಉತ್ತರಿಸಿ

1) ಜೂನ್ – ಜುಲೈ ತಿಂಗಳುಗಳಲ್ಲಿ ಸಮುದ್ರ ಮೀನುಗಾರಿಕೆಗೆ ಅವಕಾಶವಿರುವುದಿಲ್ಲ ಏಕೆ?

.................................................................................................................................

.................................................................................................................................

.................................................................................................................................

2) ಮನೆಗಳಿಗೆ ಮಿಂಚು ಬಂಧಕಗಳನ್ನು ಅಳವಡಿಸಲೇಬೇಕು? ಏಕೆ?

.................................................................................................................................

.................................................................................................................................

.................................................................................................................................

3) 'ಮಾರುತಗಳು ಹಾನಿ ಉಂಟು ಮಾಡುತ್ತವೆ, ಆದರೆ ಅವು ಮಳೆ ತರುವ ಸ್ನೇಹಿತರು' ಎಂದು ರಾಜು ವಾದಿಸುತ್ತಾನೆ. ಆತನ ವಾದವನ್ನು ಸಮರ್ಥಿಸಿ.

.................................................................................................................................

.................................................................................................................................

.................................................................................................................................

# ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 14
# ಕಣಗಳ ಕೌತುಕ ಲೋಕ

G6T5K4

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ : ದ್ರವ್ಯಗಳಲ್ಲಿ ಕಣಗಳ ಜೋಡಣೆಯನ್ನು ಗುರುತಿಸುವರು.**

**ಚಟುವಟಿಕೆ 1 :**

ನಮ್ಮ ಸುತ್ತಲಿನ ಪರಿಸರದಲ್ಲಿ ಅನೇಕಾನೇಕ ದ್ರವ್ಯಗಳು ಸೃಷ್ಟಿಯಾಗಲು ಕಾರಣವೆಂದರೆ ಅವುಗಳಲ್ಲಿನ ಕಣಗಳ ಜೋಡಣೆ. ಈ ರೀತಿಯ ವಸ್ತುಗಳಲ್ಲಿ ಕಣಗಳು ಯಾವ ರೀತಿ ಜೋಡಣೆಗೊಂಡಿರುತ್ತವೆ ಎಂಬುದನ್ನು ಈ ಚಟುವಟಿಕೆಯ ಮೂಲಕ ತಿಳಿದುಕೊಳ್ಳೋಣ.

ಕೋಷ್ಟಕದಲ್ಲಿ ಕೆಲವು ಚಿತ್ರಗಳು ಮತ್ತು ವಿವರಣೆಗಳನ್ನು ನೀಡಲಾಗಿದೆ. ಕಾರಣಗಳನ್ನು ಪತ್ತೆ ಹಚ್ಚಿ ಅವುಗಳ ಮುಂದೆ ಕ್ರಮವಾಗಿ ಬರೆಯುವುದು. ಈ ಚಟುವಟಿಕೆಗೆ ಸಂಬಂಧಿಸಿದಂತೆ ನಿಮ್ಮ ತೀರ್ಮಾನವನ್ನು ಬರೆಯಿರಿ.

| ಕ್ರ.ಸಂ. | ಚಿತ್ರಗಳು | ವಿವರಣೆಗಳು | ಕಾರಣಗಳು |
|---|---|---|---|
| 1 |  | ನೀರಿನಲ್ಲಿ ಕೈಗಳನ್ನು ಮುಳುಗಿಸಿರುವುದು | |
| 2 |  | ಗಾಳಿಯಲ್ಲಿ ಕೈಗಳನ್ನು ಬೀಸುತ್ತಿರುವುದು | |
| 3 |  | ಮೇಜಿನ ಒಳಗೆ ಕೈಯನ್ನು ತಳ್ಳಲು ಪ್ರಯತ್ನಿಸುತ್ತಿದ್ದರು ಅದು ಸಾಧ್ಯವಾಗುತ್ತಿಲ್ಲ | |

ತೀರ್ಮಾನ:

NOT TO BE REPUBLISHED ©KTBS

# ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 15

## ಅದೃಶ್ಯ ಕಣಗಳ ಅವಿರತ ಪಯಣ

T9Y3H6

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ : ದ್ರವ್ಯಗಳಲ್ಲಿ ಕಣಗಳ ಜೋಡಣೆಯನ್ನು ಗುರುತಿಸುವರು.**

### ಚಟುವಟಿಕೆ 1 :

**ಉದ್ದೇಶ :** ಗಾಳಿಯ ಕಣಗಳು ನಿರಂತರ ಚಲನೆಯಿಂದ ಕೂಡಿರುತ್ತವೆ ಎಂದು ತೋರಿಸುವುದು.

ಬೇಕಾಗುವ ಸಾಮಗ್ರಿಗಳು : ಸುಗಂಧ ದ್ರವ್ಯವಿರುವ ಬಾಟಲ್

**ಕಾರ್ಯ ವಿಧಾನ :** ಲಭ್ಯವಿರುವ ಒಂದು ಸುಗಂಧ ದ್ರವ್ಯವಿರುವ ಬಾಟಲ್ ಅನ್ನು ಕೊಠಡಿಯ ಒಂದು ಮೂಲೆಯ–ಲ್ಲಿ ಇಡಬೇಕು. ನೀವು ಇನ್ನೊಂದು ಮೂಲೆಯಲ್ಲಿ ಕುಳಿತುಕೊಳ್ಳಬೇಕು. ಸ್ವಲ್ಪ ಸಮಯ ಕಳೆದಂತೆ ಸುಗಂಧ ದ್ರವ್ಯದ ವಾಸನೆ ನಿಮ್ಮ ಮೂಗಿಗೆ ತಲುಪುತ್ತದೆ. ಇದಕ್ಕೆ ಕಾರಣವೇನಿರಬಹುದು? ಯೋಚಿಸಿ ನಿಮ್ಮ ಶಿಕ್ಷಕರೊಂದಿಗೆ ಚರ್ಚಿಸಿ. ನಿಮ್ಮ ತೀರ್ಮಾನವನ್ನು ದಾಖಲಿಸಿ.

**ತೀರ್ಮಾನ :**

.............................................................................................................

.............................................................................................................

.............................................................................................................

@KTBS
NOT TO BE REPUBLISHED

### ಚಟುವಟಿಕೆ 2 :

**ಉದ್ದೇಶ :** ದ್ರವ್ಯಗಳಿಗೆ ಉಷ್ಣ ನೀಡಿದಾಗ ಅವುಗಳ ಸ್ಥಿತಿ ಬದಲಾಗುತ್ತದೆ ಎಂದು ತೋರಿಸುವುದು.

**ಬೇಕಾಗುವ ಸಾಮಗ್ರಿಗಳು :** ಗಾಜಿನ ಪಾತ್ರೆ , ಮಂಜುಗಡ್ಡೆ, ಮದ್ಯಸಾರ ದೀಪ, ಸ್ಟ್ಯಾಂಡ್.

**ಕಾರ್ಯವಿಧಾನ :** ಒಂದು ಗಾಜಿನ ಪಾತ್ರೆಯನ್ನು ತೆಗೆದು ಕೊಂಡು ಸ್ಟ್ಯಾಂಡ್‌ನ ಮೇಲೆ ಇರಿಸಿ ಅದರಲ್ಲಿ ಸ್ವಲ್ಪ ಮಂಜುಗ–ಡ್ಡೆಯ ಚೂರುಗಳನ್ನು ತೆಗೆದುಕೊಳ್ಳುವುದು ಮತ್ತು ಇದನ್ನು ಮದ್ಯಸಾರ ದೀಪದಿಂದ ಕಾಯಿಸಬೇಕು. ಸ್ವಲ್ಪ ಸಮಯದ ನಂತರ ಮಂಜುಗಡ್ಡೆಯು ಕರಗಿ ನೀರಾಗುತ್ತದೆ. ಇದಕ್ಕೆ ಕಾರಣವೇನು? ಈ ಕ್ರಿಯೆಗೂ ಮತ್ತು ದ್ರವ್ಯಗಳ ಕಣಗಳ ಜೋಡಣೆಗೂ ಏನಾದರು ಸಂಬಂಧವಿದೆಯೇ? ನಿಮ್ಮ ತೀರ್ಮಾನವನ್ನು ದಾಖಲಿಸಿ.



Fig. 8.1. Determination of melting point of ice

## ಬೆಂಬಲಿತ ಕಲಿಕೆಯ ಹಂತ – ಚಟುವಟಿಕೆ ಹಾಳೆ – 16
## ದ್ರವ್ಯದ ಅಂತರಾಳ – ಕಣಗಳ ಜೋಡಣೆ

N7W5S7

ಹೆಚ್ಚಿನ ಕಲಿಕೆಗಾಗಿ ಸ್ಕ್ಯಾನ್ ಮಾಡಿ

**ಕಲಿಕಾಫಲ : ದ್ರವ್ಯದ ಕಣಗಳ ಜೋಡಣೆಯಿಂದ ದ್ರವ್ಯದ ಸ್ಥಿತಿಗಳು ಉಂಟಾಗಿರುವುದನ್ನು ಗುರುತಿಸುವರು.**

ಪೂರ್ವ ಕಲ್ಪನೆ : ವಿದ್ಯಾರ್ಥಿಗಳೇ, ನಿಮಗೆಲ್ಲಾ ಗೊತ್ತಿರುವ ಹಾಗೆ ದ್ರವ್ಯಗಳು ನಾಲ್ಕು ಸ್ಥಿತಿಗಳನ್ನು ಹೊಂದಿವೆ. ಅವುಗಳೆಂದರೆ ಘನ, ದ್ರವ, ಅನಿಲ, ಮತ್ತು ಪ್ಲಾಸ್ಮಾ. ಪ್ಲಾಸ್ಮಾ ಸ್ಥಿತಿಯು ನಕ್ಷತ್ರಗಳಲ್ಲಿ ಸಾಮಾನ್ಯವಾಗಿರುವುದರಿಂದ ನಾವು ಸಾಮಾನ್ಯವಾಗಿ ಘನ, ದ್ರವ ಮತ್ತು ಅನಿಲ ಗಳನ್ನು ಮಾತ್ರ ಪರಿಗಣಿಸೋಣ. ಎಲ್ಲಾ ದ್ರವ್ಯಗಳು ಕಣಗಳಿಂದ ಕೂಡಿರುತ್ತವೆ. ಆದರೆ ಆ ಕಣಗಳ ಜೋಡಣೆಯ ವಿಶಿಷ್ಟತೆಯಿಂದ ದ್ರವ್ಯದ ಮೂರು ಸ್ಥಿತಿಗಳು ಉಂಟಾಗಿರುತ್ತವೆ. ಜೊತೆಗೆ ವಿಶಿಷ್ಟವಾದ ಗುಣಗಳನ್ನು ಪಡೆದಿರುತ್ತವೆ.

**ಚಟುವಟಿಕೆ 1 :**

ಕೆಳಗೆ ಕೊಟ್ಟಿರುವ ಕೋಷ್ಟಕದಲ್ಲಿ ದ್ರವ್ಯಗಳ ಕೆಲವು ಮುಖ್ಯ ಗುಣಗಳ ಸುಳಿವುಗಳನ್ನು ನೀಡಲಾಗಿದೆ. ಅವುಗಳ ಆಧಾರದ ಮೇಲೆ ಆ ದ್ರವ್ಯದ ಸ್ಥಿತಿ ಮತ್ತು ಆ ವಸ್ತುವನ್ನು ಹೆಸರಿಸುವುದು. ಅಂತಿಮವಾಗಿ ನಿಮ್ಮ ತೀರ್ಮಾನವನ್ನು ದಾಖಲಿಸಿ.

| ಕ್ರ.ಸಂ. | ಸುಳಿವುಗಳು | ದ್ರವ್ಯದ ಸ್ಥಿತಿ ಮತ್ತು ಹೆಸರು |
|---|---|---|
| 1 | ಕಣಗಳು ಒತ್ತೊತ್ತಾಗಿ ಜೋಡಣೆಗೊಂಡಿವೆ. ಕಣಗಳ ಚಲನೆ ನಗಣ್ಯ. ನಿರ್ದಿಷ್ಟವಾದ ರಾಶಿ, ಆಕಾರ, ಗಾತ್ರ, ಹೊಂದಿದೆ. ಕಠಿಣವಾಗಿರುತ್ತದೆ. . | |
| 2 | ಇದನ್ನು ಗೋಡೆಗೆ ಮೊಳೆ ಹೊಡೆಯಲು ಬಳಸುತ್ತಾರೆ ಕಣಗಳು ಸ್ವಲ್ಪ ಸಡಿಲವಾಗಿರುತ್ತವೆ. ಕಣಗಳು ಚಲನೆಯಿಂದ ಕೂಡಿರುತ್ತವೆ. ನಿರ್ದಿಷ್ಟ ರಾಶಿ ಹೊಂದಿರುತ್ತದೆ. ನಿರ್ದಿಷ್ಟ ಆಕಾರ ಹೊಂದಿರುವುದಿಲ್ಲ, ಆದರೆ ನಿರ್ದಿಷ್ಟ ಗಾತ್ರ ಹೊಂದಿರುತ್ತದೆ. | |
